
ನಮ್ಮ ಮಾನಸ

ಸಂಪುಟ : 2 ಏಪ್ರಿಲ್ 2009 ಸಂಚಿಕೆ : 12



".... ನಿಮ್ಮಲ್ಲಿ ನಿಮಗೆ ನಂಬಿಕೆ ಇರಲಿ. ನ್ಯಾಯಪರ ಹೋರಾಟಕ್ಕೆ ಸೋಲಿಲ್ಲ. ಹೋರಾಟವೇ ನಮಗೆ ಪರಿಪೂರ್ಣ ಆನಂದ ಹಾಗೂ ಆಧ್ಯಾತ್ಮಿಕತೆ. ನಮ್ಮ ಹೋರಾಟ.... ನಮ್ಮ ವಿಮೋಚನೆ ಹಾಗೂ ಸ್ವಾತಂತ್ರ್ಯಕ್ಕೆ. ಮಾನವ ವ್ಯಕ್ತಿತ್ವದ ಸುಧಾರಣೆಗೋಸ್ಕರ ಈ ಹೋರಾಟ"

- ಡಾ|| ಬಿ.ಆರ್. ಅಂಬೇಡ್ಕರ್

ಹೊಟ್ಟೆಯಲ್ಲಿನ ಭ್ರೂಣ,
ಕರುಳ ಬಳ್ಳಿಯ ಹಿಡಿದು-
ಜೀಕುತ್ತ ಕೇಳಿತು-
ಅಮ್ಮಾ, ನಾನೆಲ್ಲಿಂದ ಬಂದೆ....?
ಉತ್ತರಿಸಲು ನಾ ತಡವರಿಸಿದೆ-
ನಿನ್ನನ್ನು ನಮಗೆಂದು
ಆ ದೇವರು ಕಳುಹಿಸಿದ್ದಾನೆ-
ದೇವರೇ....? ಇದು ನಿಜವೇ....?
ನಾ ಹೊರ ಬರುವ ಮೊದಲೇ-
ನನ್ನೊಂದಿಗೆ ಸುಳ್ಳು ಹೇಳುತ್ತೀಯಾ....?
ಜೋರಾಗಿ ಜೀಕುತ್ತ ಪ್ರಶ್ನಿಸಿತು-
ನಾ ನೋವಿನಿಂದ ಮುಲುಗುಟ್ಟಿದೆ....

ಹೊಟ್ಟೆಯಲ್ಲಿನ ಭ್ರೂಣ,
ಕರುಳ ಬಳ್ಳಿಯ ಮಾಲೆಯಲ್ಲಿ-
ಜೋಕಾಲಿ ಆಡುತ್ತ ಕೇಳಿತು-
ಅಮ್ಮ, ನಾ ಹೊರಬಂದಾಗ,
ಹೆಣ್ಣಾಗಿದ್ದರೆ ಸಾಯಿಸಿ ಬಿಡುತ್ತೀರಾ...?
ಮಾತಿಗಾಗಿ ನಾ ತಡಕಾಡಿದೆ-
ಇಲ್ಲಮ್ಮ, ನೀ ನಮ್ಮ ಚಿನ್ನ,
ನಿನ್ನ ಸಾಯಿಸುವುದೇ....?
ಅಂದರೆ ನಂತರ ಹೆಣ್ಣೆಂದು ಚುಚ್ಚಿ,
ಇಂಚಿಂಚಾಗಿ ಸಾಯಿಸುತ್ತೀರಾ...?
ಕರುಳ ಎಳೆಯ ಬಿಗಿ ಹಿಡಿದಿತ್ತು-
ನಾ ವೇದನೆಯಿಂದ ಮುಖ ಕಿವುಚಿದೆ....

ಹೊಟ್ಟೆಯಲ್ಲಿನ ಭ್ರೂಣ,
ಕರುಳ ಹೆಣಿಕೆಯ ನಡುವೆ-
ಜಿಗಿದಾಡುತ್ತ ಕೇಳುತ್ತಲೇ ಇತ್ತು-
ಒಂದಾದ ಮೇಲೆ ಒಂದರಂತೆ ಸಾಲು ಪ್ರಶ್ನೆ-
ಉತ್ತರಿಸುತ್ತಲೇ ಅದಕ್ಕೊಂದು ಕೊಂಕು-
ಕೊನೆಗೆ ಗದರಿದೆ ಬೇಸತ್ತು-
ಸುಮ್ಮನಿರು ಹೊರ ಬಂದಾಗ ತಿಳಿಯುತ್ತದೆ...

ಭ್ರೂಣ ನಿಧಾನವಾಗಿ ಉತ್ತರಿಸಿತು-
ಈಗಲೆ ಹೆದರಿಸಿ ಬಾಯ್ಮುಚ್ಚಿಸುವ ನೀನು
ನಂತರ ನನ್ನ ಹೇಗೆ ಸಂಭಾಳಿಸುವೆ...?
ಹೊಟ್ಟೆ ಸವರಿ ನಾನು ಬೆಚ್ಚಿಬಿದ್ದೆ,
ಎಲ್ಲೆಲ್ಲೂ ನಿಶ್ಶಬ್ದ, ನಿಶ್ಚಲ...!
ನಾ ಭಯದಿಂದ ಚೀತ್ಕರಿಸಿದೆ.....

-ಶ್ರೀದೇವಿ ಕೆರೆಮನೆ



ಭ್ರೂಣ ಮತ್ತು ನಾನು

ಒಳಗಿನ ಪುಟಗಳಲ್ಲಿ....

ಓದುಗರ ಗಮನಕ್ಕೆ

ಓದುಗರೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ 'ನಮ್ಮ ಮಾನಸ'ದ ಪ್ರಕಟಣೆ ಸಾಧ್ಯವಾಗಿದೆ. ಪತ್ರಿಕೆಗೆ ಓದುಗರ ಚಂದಾಹಣವೇ ಜೀವಾಳ. ಚಂದಾಹಣ ಕಳುಹಿಸಿ ಮತ್ತು ಚಂದಾ ನವೀಕರಿಸಬೇಕಾದವರು ನವೀಕರಿಸಿ ಪತ್ರಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆಂದು ವಿನಮ್ರವಾಗಿ ಕೋರುತ್ತೇವೆ.

ವಾರ್ಷಿಕ ಚಂದಾ – ರೂ. 100/-

ನಮ್ಮ ಮಾನಸ

ಏಪ್ರಿಲ್ 2009

ಸಂಪುಟ : 2 ಸಂಚಿಕೆ : 12

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara
New Timberyard Layout, Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ದಲಿತ ಸ್ತ್ರೀವಾದಿ ಚಳವಳಿಯ ಹೊಸ ಚಹರೆ

1990ರಿಂದ ಈಚೆಗೆ ದಲಿತ ಸ್ತ್ರೀವಾದಿ ಪ್ರಜ್ಞೆಯಿಂದ ಹುಟ್ಟಿಕೊಂಡ ಸ್ತ್ರೀವಾದಿ ಗುಂಪುಗಳು ದಲಿತ ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿವೆ. ಜಾಗತೀಕರಣ, ಮುಕ್ತ ಮಾರುಕಟ್ಟೆಯ ಸ್ಪರ್ಧೆಯಲ್ಲಿ ಭಾಷೆ, ಧರ್ಮ, ಜಾತಿಯ ಹಿನ್ನೆಲೆಯಲ್ಲಿ ಕ್ರೋಡೀಕರಣಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿಯೇ ದಲಿತ ಮಹಿಳೆಯರು ಸ್ಪಷ್ಟವಾದ ಕೆಲವು ನಿಲುವುಗಳೊಂದಿಗೆ ದಲಿತ ಮಹಿಳಾ ಚಳವಳಿಯ ಧ್ವನಿ ಎತ್ತುತ್ತಿರುವುದು ಸ್ವಾಗತಾರ್ಹವಾಗಿದೆ. ಜಾತಿ ಹಾಗೂ ಲಿಂಗದ ಆಯಾಮಗಳು ಹುಟ್ಟುಹಾಕುವ ಅಸಮಾನತೆಯನ್ನು ಒಂದು ಭಿನ್ನ ನಿಲುವಿನ ರಾಜಕೀಯದಲ್ಲಿಯೇ ಅರ್ಥಮಾಡಿಕೊಳ್ಳಬೇಕೆನ್ನುವ ದಲಿತ ಸ್ತ್ರೀವಾದಿಗಳು ಭಿನ್ನತೆಯ ರಾಜಕೀಯ (politics of difference) ವನ್ನು ತಾತ್ತ್ವಿಕವಾಗಿ ಒಪ್ಪಿಕೊಳ್ಳಬೇಕೆನ್ನುತ್ತಾರೆ.

ದಲಿತ ಸ್ತ್ರೀವಾದಿ ಪ್ರಜ್ಞೆಯಿಂದ ದಲಿತ ಮಹಿಳಾ ಚಳವಳಿ ಹುಟ್ಟಿರುವುದು ಎರಡು ಅಂಶಗಳಿಂದಾಗಿ ಎಂದು ಗುರುತಿಸಲಾಗಿದೆ. ಜಾತಿಯ ರಚನೆ, ಅಸ್ಪೃಶ್ಯತೆಯ ಮೇಲೆ ಹೇರಲಾದ ಅವಮಾನಗಳು, ಸಾಮಾಜಿಕ ಅಸಮಾನತೆ, ದೌರ್ಜನ್ಯಗಳನ್ನು, ದಲಿತ ಮಹಿಳೆಯರ ಅಸ್ತಿತ್ವದ ಹೋರಾಟಗಳನ್ನು ಪಟ್ಟಣವಾಸಿ ವಿದ್ಯಾವಂತರೇ ಇರುವ ಮಹಿಳಾ ಚಳವಳಿಗಳು ನೇರವಾಗಿ ಎತ್ತಿಕೊಳ್ಳಲಿಲ್ಲ ಎಂಬುದು ಒಂದು ಅಂಶ. ದಲಿತ ಚಳವಳಿ ಕೂಡಾ ಮಹಿಳಾ ಸಮಸ್ಯೆಗಳ ಹೋರಾಟ ನಡೆಸಲು ಮಹಿಳಾ ನಾಯಕತ್ವವನ್ನು ಚಳವಳಿಯೊಳಗೆ ಪ್ರೋತ್ಸಾಹಿಸಲಿಲ್ಲ ಎಂಬುದು ಇನ್ನೊಂದು ಅಂಶ.

ಸಮುದಾಯದ ಮೇಲೆ ದಾಳಿ ನಡೆದಾಗ ಮಹಿಳೆಯರ ರಕ್ಷಣೆಯಂತಹ ಮಹಿಳಾ ಪ್ರಶ್ನೆಗಳನ್ನು ಮಾತ್ರ ದಲಿತ ಚಳವಳಿ ಕೈಗೆತ್ತಿಕೊಂಡಿದೆ. ಮಹಿಳೆಯರ ಸಬಲತೆಯ ಪ್ರಶ್ನೆ ಎನ್ನುವುದಕ್ಕಿಂತ ಸಂಕಟಕ್ಕೆ ಗುರಿಯಾದ (endangered) ಮಹಿಳೆಯರನ್ನು ರಕ್ಷಿಸುವುದು ದಲಿತ ಚಳವಳಿಯ ಮುಖ್ಯ ಕಾಳಜಿಯಾಗಿದೆ ಎಂಬುದು ದಲಿತ ಸ್ತ್ರೀವಾದಿ ಚಿಂತಕರ ಅಭಿಪ್ರಾಯ. ದಲಿತ ಸಮುದಾಯದೊಳಗಿನ ಪಿತೃಪ್ರಾಧಾನ್ಯವನ್ನು ಪ್ರಶ್ನಿಸುವುದು, ಹೋರಾಡುವುದು ಕೂಡಾ ಹೊರಗಿನ ದೌರ್ಜನ್ಯಕ್ಕಾಗಿ ಹೋರಾಡುವಷ್ಟೇ ಮುಖ್ಯ. ಜಾತಿ ಹಾಗೂ ಲಿಂಗಾಧರಿತ ಸಮಸ್ಯೆಗಳು ದಲಿತ ಮಹಿಳೆಯರ ಬದುಕಿನಲ್ಲಿ ಒಟ್ಟಾಗಿ ಹೆಣೆದುಕೊಂಡು ಭಿನ್ನ ಭಿನ್ನ ಶೋಷಣೆಗೆ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಆಕೆ ಒಂದಾಗಿರುವುದರಿಂದ ಹೋರಾಟದ ನೆಲೆಗಳೂ ಕೂಡಾ ಮಹಿಳಾ ಚಳವಳಿಗಿಂತ ಭಿನ್ನ ರೀತಿಯಲ್ಲಿಯೇ ಇರಬೇಕೆಂದು ದಲಿತ ಸ್ತ್ರೀವಾದಿಗಳು ವಾದಿಸುತ್ತಾರೆ. ಎಲ್ಲಾ

ಮಹಿಳೆಯರು ದಲಿತರು ಎನ್ನುವ ಸಾಮಾನ್ಯೀಕರಣದ ಮಹಿಳಾ ಚಳವಳಿಯ ತಾತ್ತ್ವಿಕ ಗ್ರಹಿಕೆಯನ್ನು ಪ್ರಶ್ನಿಸುತ್ತಾ, ಭಿನ್ನತೆಯ ರಾಜಕೀಯವನ್ನು ದಲಿತ ಸ್ತ್ರೀವಾದಿಗಳು ಎತ್ತಿಹಿಡಿಯುತ್ತಾರೆ.

ದಲಿತ ಮಹಿಳಾ ಚಳವಳಿ ಇಂದು ಅಸ್ಪೃಶ್ಯತೆ ಹಾಗೂ ಜಾತಿಯ ವಿರುದ್ಧ ಹೋರಾಡುತ್ತಲೇ ಮಹಿಳೆಯರ ಘನತೆಯ ಬದುಕನ್ನು ಎತ್ತಿ ಹಿಡಿಯುತ್ತಿದೆ; ತಮ್ಮದು ವಿಶಿಷ್ಟ ಧ್ವನಿ ಎಂದು ಪ್ರತಿಪಾದಿಸುತ್ತಿದೆ. ದಲಿತ ಮಹಿಳೆಯರಿಗೆ ಭೂಮಿ ಒಂದು ವಸ್ತುವಲ್ಲ, ಭೂಮಿ ಆಕೆಯ ಬದುಕಿನ ಒಂದು ಹಕ್ಕು ಎಂಬುದಾಗಿ ದಲಿತ ಸ್ತ್ರೀವಾದಿಗಳು ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ದಲಿತ ಮಹಿಳೆಗೆ 5 ಎಕರೆ ಒಣಭೂಮಿ, ಹಾಗೂ 2.5 ಎಕರೆ ನೀರಾವರಿ ಭೂಮಿಯನ್ನು ನೀಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಡಲು ತೀರ್ಮಾನಿಸಲಾಗಿದೆ. ದಲಿತ ಮಹಿಳೆಯರು ಭೂಮಿಯನ್ನು ಹೊಂದುವುದರಿಂದ ಮೇಲುಜಾತಿಯ ಜಮೀನ್‌ದಾರರಿಂದ ನಡೆಯುವ ದೌರ್ಜನ್ಯವನ್ನು ಹಾಗೂ ಮನೆಯಲ್ಲಿ, ಕುಟುಂಬದ ಒಳಗೆ ಆಕೆಯ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಕೊನೆಗೊಳಿಸಬಹುದಾಗಿದೆ ಎಂಬ ಚಿಂತನೆ ಕೂಡಾ ಇದೆ. ಒಟ್ಟು ಮಹಿಳೆಯರಲ್ಲಿ ಶೇಕಡ 16.35 ಮಂದಿ ದಲಿತ ಮಹಿಳೆಯರಿದ್ದಾರೆ. ಇದರಲ್ಲಿ ಶೇಕಡ 2ರಿಂದ 3 ದಲಿತ ಮಹಿಳೆಯರು ಮಾತ್ರ ಭೂಮಿಯನ್ನು ಹೊಂದಿದ್ದಾರೆ ಎನ್ನಲಾಗಿದೆ.

ದಲಿತ ಸ್ತ್ರೀವಾದಿಗಳು ಸಾಮೂಹಿಕ ಅಧಿಕಾರ, ಶ್ರೇಣಿರಹಿತ ರಚನೆ ಹಾಗೂ ಒಳಗೊಂಡ (inclusive) ಅಧಿಕಾರದ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ದಲಿತ ರಾಜಕಾರಣಿ ಬಿ.ಎಸ್.ಪಿ.ಯ ಮಾಯಾವತಿ ಮುಖ್ಯವಾಹಿನಿಯ ಅಧಿಕಾರದ ರಾಜಕಾರಣ ಮಾಡುತ್ತಾರೆಯೇ ವಿನಃ ಪಕ್ಷದಲ್ಲಿನ ಅಥವಾ ಇನ್ನಾವುದೇ ರೀತಿಯ ಲಿಂಗಾಧರಿತ ಸಮಸ್ಯೆಯನ್ನಾಗಲೀ ಅಥವಾ ಜಾತಿಯ ನೆಲೆಯ ಪಿತೃಪ್ರಾಧಾನ್ಯವನ್ನಾಗಲೀ ಪ್ರಶ್ನಿಸದಿರುವುದರಿಂದ ದಲಿತ ಮಹಿಳಾ ಚಳವಳಿ ಇಂತಹ ನಾಯಕಿಯರನ್ನು ತಮ್ಮ ಧ್ವನಿಯಾಗಿ ಗುರುತಿಸಲು ಸಾಧ್ಯವಿಲ್ಲ ಎಂದು ಪರ್ಯಾಯ ದಲಿತ ಮಾಧ್ಯಮ ಸಂಸ್ಥೆಯ ನಿರ್ದೇಶಕಿ ಹಾಗೂ ದಲಿತರ ಹಕ್ಕುಗಳ ಕಾರ್ಯಕರ್ತೆಯಾದ ರಜನಿ ತಿಲಕ್ ಹೇಳುತ್ತಾರೆ.

ಒಳಮೀಸಲಾತಿ ಬೆಂಬಲಿಸುವುದು, ದಲಿತ ಮೀಸಲಾತಿಯಲ್ಲಿ ದಲಿತ ಮಹಿಳೆಯರಿಗೆ ಮೀಸಲಾತಿ ಕೇಳುವುದು, ವೇಶ್ಯಾ ಸಮಸ್ಯೆಯನ್ನು ಮಹಿಳಾ ಚಳವಳಿಗಿಂತ ಬೇರೆಯಾದ ನೆಲೆಯಲ್ಲಿ ನೋಡುವುದು – ಇವು ದಲಿತ ಮಹಿಳಾ ಚಳವಳಿ ಮುಂದಿಡುತ್ತಿರುವ ಬೇಡಿಕೆಗಳಾಗಿವೆ. ದಲಿತ ಮಹಿಳೆಯರ ಚಾರಿತ್ರಿಕ ಅನುಭವಗಳನ್ನು ದಾಖಲಿಸುವುದು, ಜಾತಿಯ ಸೂಕ್ಷ್ಮ ಸಂವೇದನೆಗಳನ್ನು ಹೊಂದಿರುವ ಮಹಿಳಾ ಅಧ್ಯಯನಗಳಿಗಾಗಿ ಒತ್ತಾಯಿಸುವುದು, ಈ ದಿಸೆಯಲ್ಲಿ ಅನೇಕ ಪ್ರಶ್ನೆಗಳನ್ನು ಕೂಡಾ ದಲಿತ ಚಳವಳಿ ಸೂಕ್ಷ್ಮವಾಗಿ ಅವಲೋಕಿಸುತ್ತದೆ.

- ದಲಿತ ಸಮುದಾಯದ ಮೇಲೆ ನಡೆಯುವ ದಾಳಿಗಳಲ್ಲಿ ಯಾವ ನೆಲೆಗಳಲ್ಲಿ ಲಿಂಗಾಧರಿತ ಸಮಸ್ಯೆಗಳ ವಿಚಾರ ವಿನಿಮಯ (negotiate) ಮಾಡಲಾಗಿದೆ?
- ದಲಿತ ಸಮುದಾಯದ ಒಳಗೆ ಹಾಗೂ ಹೊರ ಸಮುದಾಯದಲ್ಲಿ ಲಿಂಗ ಸಂಬಂಧಿತ ಪ್ರಶ್ನೆಗಳನ್ನು ಹೇಗೆ ನೋಡಲಾಗಿದೆ?
- ದಲಿತ ಪುರುಷರು ಹಾಗೂ ಮಹಿಳೆಯರ ಲಿಂಗಾಧರಿತ ಸಮಸ್ಯೆಗಳ ಕಾಳಜಿಗಳು ಯಾವ ರೀತಿಯವು?
- ಜಾತಿಯ ವಿನಾಶಕ್ಕೆ ದಲಿತ ಮಹಿಳಾ ಚಳವಳಿ ಹಮ್ಮಿಕೊಳ್ಳುವ ಹೋರಾಟದ ಸ್ವರೂಪವೇನು?

ಈ ರೀತಿಯ ಪ್ರಶ್ನೆಗಳಲ್ಲಿ ದಲಿತ ಸ್ತ್ರೀವಾದಿ ಚಳವಳಿ ತನ್ನ ಹೋರಾಟದ ಚಹರೆ, ರೂಪುರೇಷೆಗಳನ್ನು ರೂಪಿಸಿಕೊಳ್ಳತೊಡಗಿದೆ. ಇತರ ಮಹಿಳಾ ಚಳವಳಿಗಳು ಕೂಡಾ ಈ ಹೋರಾಟದ ಸಂವೇದನೆಗಳನ್ನು ಮತ್ತು ಬೆಂಬಲ (solidarity)ವನ್ನು ತಮ್ಮೊಳಗೆ ರೂಢಿಸಿಕೊಂಡಾಗ ಮಾತ್ರ ಮಹಿಳಾ ಚಳವಳಿಗೆ ಹೊಸ ಅರ್ಥ ಬರುವ ಸಾಧ್ಯತೆ ಇದೆ.

ಏಪ್ರಿಲ್ ಹದಿನಾಲ್ಕು ಅಂಬೇಡ್ಕರ್ ಅವರ ಜನ್ಮದಿನ. ಹೊಸ ವಿಚಾರಗಳನ್ನೊಳಗೊಳ್ಳುತ್ತ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುತ್ತಿರುವ ದಲಿತ ಮಹಿಳಾ ಚಳವಳಿ ಮತ್ತಷ್ಟು ಶಕ್ತಿಯುತವಾಗಲಿ ಎಂದು ಮಾನಸ ಬಳಗ ಹಾರೈಸುತ್ತದೆ.

* * *

'ನಮ್ಮ ಮಾನಸ' (ಮಾರ್ಚ್ ೨೦೦೯) ವಿಶೇಷ ಸಂಚಿಕೆಯ ಪ್ರಶ್ನೋತ್ತರಗಳ ಮಾಲೆಯ ಹಿನ್ನೆಲೆಯಲ್ಲಿ ಗಂಭೀರ ಚಿಂತನೆಗಳು ಆರಂಭವಾಗಿವೆ. ಎಲ್ಲ ಅಭಿಪ್ರಾಯಗಳನ್ನು ಒಟ್ಟಾಗಿ ಚರ್ಚಿಸಿ ಒಂದು ಗಂಭೀರ ಚರ್ಚೆ ಮತ್ತು ವಿಶ್ಲೇಷಣೆ ಮಾಡಿ, ಸ್ಪಷ್ಟ ನಿಲುವಿಗೆ ಬರುವುದು ಉದ್ದೇಶ. ಅದಕ್ಕಾಗಿ ಎಲ್ಲ ಉತ್ತರಗಳೂ ಪ್ರಕಟವಾಗುವವರೆಗೆ ಕಾಯುತ್ತೇವೆ. ಇನ್ನೂ ಕಳಿಸಿಲ್ಲದಿರುವವರು ಕೂಡಲೇ ಕಳಿಸಿದರೆ, ಸ್ವಾಗತವಿದೆ.

ವಿಶೇಷಾಂಕವನ್ನು ಮೆಚ್ಚಿ ಬರೆದವರು. ಕರೆ ಮಾಡಿದವರು, ವಿವಿಧ ವಲಯಗಳಲ್ಲಿ ಚರ್ಚಿಸಿದವರು ಇವರಿಗೆಲ್ಲ 'ನಮ್ಮ ಮಾನಸ'ದ ಕೃತಜ್ಞತೆಗಳಿವೆ. ಮುದ್ರಣದಲ್ಲಿ ವಿಶೇಷ ರಿಯಾಯಿತಿ ತೋರಿಸಿ ನೆರವಾದ ಇಳಾ ಮುದ್ರಣದ ಬಿ. ಗುರುಮೂರ್ತಿ ಹಾಗೂ ವೈಯಕ್ತಿಕ ನೆಲೆಯಲ್ಲಿ ಆರ್ಥಿಕ ನೆರವನ್ನೊದಗಿಸಿದ ಎನ್. ವಿದ್ಯಾಶಂಕರ್ ಅವರಿಗೆ ಮತ್ತು ಜಾಹಿರಾತು, ಬೆಂಬಲ ನೀಡಿದವರಿಗೆಲ್ಲ ವಿಶೇಷ ಕೃತಜ್ಞತೆಗಳು.

ಡಾ॥ ಪ್ರೀತಿ ಶುಭಚಂದ್ರ ಅವರ 'ಮಹಿಳಾ ವಿಮರ್ಶೆ ಮತ್ತು ಸಂಶೋಧನೆ' ಲೇಖನದ ಒಂದು ಕಂತು ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿದೆ. ಈ ಲೇಖನ ಮಾಲೆ ಮುಗಿಯುವ ಹೊತ್ತಿಗೆ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಚಿಂತಕರೊಂದಿಗೆ (ಲೇಖಕಿಯನ್ನು ಒಳಗೊಂಡಂತೆ) ಈ ಲೇಖನವನ್ನು ಕುರಿತಂತೆ ಚರ್ಚೆ – ಸಂವಾದ ಏರ್ಪಡಿಸಲಾಗುವುದು. ಅನಂತರ ಆ ಚರ್ಚೆಯ ಮುಖ್ಯಾಂಶಗಳನ್ನು ಪ್ರಕಟಿಸಲಾಗುವುದು.

* * *

ಖ್ಯಾತ ಕತೆ–ಕಾದಂಬರಿಗಾರ್ತಿ ಶಶಿ ದೇಶಪಾಂಡೆ ಅವರಿಗೆ ಪದ್ಮಶ್ರೀ ಪ್ರಶಸ್ತಿ ಗೌರವ ಸಂದಿದೆ. ರಂಗಕರ್ಮಿ, ಕಲಾವಿದೆ ಅರುಂಧತಿ ನಾಗ್ ಅವರಿಗೆ ಕೇಂದ್ರ ಸಂಗೀತ ನಾಟಕ ಅಕಾಡಮಿಯ ಪ್ರಶಸ್ತಿ ಗೌರವ ಹಾಗೂ ರಂಗ ನಿರ್ದೇಶಕಿ, ಅಭಿನೇತ್ರಿ ಬಿ.ಜಯಶ್ರೀ ಅವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಲಭಿಸಿದೆ. ಇವರೆಲ್ಲರಿಗೂ 'ನಮ್ಮ ಮಾನಸ'ದ ಅಭಿನಂದನೆಗಳಿವೆ. ಈ ಸಾಧಕಿಯರನ್ನು ಕುರಿತ ಲೇಖನ, ಸಂದರ್ಶನಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

❑

ಸಂಸ್ಕೃತಿ, ನೀತಿ ಮತ್ತು ನೈತಿಕತೆ ನೆಪದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಕುರಿತ ಸತ್ಯಶೋಧನ ವರದಿಯ ಮುಖ್ಯಾಂಶಗಳು

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ – ಕರ್ನಾಟಕ ವತಿಯಿಂದ



ಫಿಯರ್, ಚಿತ್ರ ಕೃಪೆ : ಸಿ. ಚಂದ್ರಶೇಖರ್

ಇತ್ತೀಚಿನ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯದಲ್ಲೇ ಅತೀ ಹೆಚ್ಚು ಸುದ್ದಿಯಲ್ಲಿರುವ ಜಿಲ್ಲೆ. ನೈತಿಕತೆ ಹೆಸರಿನಲ್ಲಿ ದಿನಕ್ಕೊಂದರಂತೆ ನಡೆಯಬಾರದ ಘಟನೆಗಳು ಸಂಭವಿಸುತ್ತಿರುವುದು ವರದಿಯಾಗುತ್ತಿದೆ. ಅವುಗಳಲ್ಲಿ ಬಹಳ ಪ್ರಮುಖವಾದ ಘಟನೆ 2009ರ ಜನವರಿ 24 ರಂದು ಮಂಗಳೂರಿನ ಅಮ್ನೇಶಿಯ ಪಬ್‌ನಲ್ಲಿ ತರುಣಿಯರ ಮೇಲೆ ಶ್ರೀರಾಮ ಸೇನೆ ದಾಳಿ ಮತ್ತು ಯುವತಿಯರ ಮೇಲೆ ನಡೆಸಿದ ಮಾರಣಾಂತಿಕ ಹಲ್ಲೆ. ಹಲ್ಲೆಯ ಸ್ವರೂಪವನ್ನು ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಟಿವಿ ಮತ್ತು ಪತ್ರಿಕಾ ಮಾಧ್ಯಮಗಳೆಲ್ಲವೂ ವಾರಗಟ್ಟಲೆ ಬಿತ್ತರಿಸಿದವು. ಇದು ಒಂದು ಅತ್ಯಂತ ಕ್ರೂರ, ಅನಾಗರಿಕ ಹಾಗೂ ಅವಮಾನೀಯ ಘಟನೆ. ಇಂತಹ ಘಟನೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಹಲವಾರು ಪ್ರಶ್ನೆಗಳು ಉದ್ಭವವಾಗತೊಡಗಿದವು. ಈ ಘಟನೆಗಳು ನಡೆಯಲು ನಿಜವಾದ ಕಾರಣಗಳಾದರೂ ಏನು ಎಂದು ತಿಳಿಯುವ ತವಕ ಜನಮಾನಸದಲ್ಲಿ ಕಾಣುತ್ತಿತ್ತು. ಇಡೀ ಪ್ರಕರಣದ ಬಗ್ಗೆ ಸತ್ಯಾಸತ್ಯತೆ ಅರಿಯಲು ಘಟನಾವಳಿಗಳು ನಡೆದ ಸ್ಥಳಕ್ಕೆ ಭೇಟಿ ನೀಡಿ ಪ್ರಥಮ ಮಾಹಿತಿ ಸಂಗ್ರಹಿಸಲು ಪಿಯುಸಿಎಲ್ – ಕರ್ನಾಟಕ ನಿರ್ಧರಿಸಿತು. ಪಿಯುಸಿಎಲ್‌ನ ಪ್ರೊ॥ ರಾಮದಾಸ್‌ರಾವ್ ನೇತೃತ್ವದಲ್ಲಿ ನಾಲ್ಕು ಜನರ ಸತ್ಯ ಶೋಧನ ಸಮಿತಿಯನ್ನು ರಚಿಸಿತು. ವಿಮೋಚನದ ಶ್ರೀಮತಿ ಶಕುನ್ ಮೋಹಿನಿ, ಪರ್ಯಾಯ ಕಾನೂನು ವೇದಿಕೆಯ ಶ್ರೀ ಅರವಿಂದ ನಾರಾಯಣ್ ಹಾಗೂ ಹೆಂಗಸರ ಹಕ್ಕಿನ ಸಂಘದ ಶ್ರೀಮತಿ ಉಷಾರವರು ಇದರ ಸದಸ್ಯರು. ದಕ್ಷಿಣ ಕನ್ನಡದಲ್ಲಿ ನಿರಂತರವಾಗಿ ನಡೆಯುತ್ತಿರುವ ಹಲ್ಲೆ, ದೌರ್ಜನ್ಯ ಮತ್ತು ವಿದ್ಯಾಮಾನಗಳ ಬಗ್ಗೆ ತನಿಖೆ ನಡೆಸಿ ವರದಿ ತರಿಸಿಕೊಳ್ಳಲು ತೀರ್ಮಾನಿಸಲಾಯಿತು. ಕಳೆದ ತಿಂಗಳಲ್ಲಿ 4 ದಿನಗಳ ಕಾಲ ಮಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಭೇಟಿ ನೀಡಿ ತನಿಖಾ ವರದಿಯನ್ನು ಸಿದ್ಧಪಡಿಸಿತು. ಈ ವಿಷಯದ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಬೇಕಾದ ಅಂಶಗಳು ತನಿಖೆಯಿಂದ ಸಾಬೀತಾಗಿವೆ. ವರದಿಯ ಸಾರಾಂಶ ಕೆಳಗಿನಂತಿದೆ:

ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಹಲ್ಲೆಯ ವಿದ್ಯಮಾನಗಳನ್ನು ಗಮನಿಸಿದಾಗ ಕೇವಲ ಪಬ್ ದಾಳಿಯಲ್ಲದೆ, ಇಲ್ಲಿ ನಡೆಯುತ್ತಿರುವ ವಿವಿಧ ರೀತಿಯ ಎಲ್ಲಾ ಹಲ್ಲೆಗಳು ಕೋಮುವಾದಿ ಶಕ್ತಿಗಳಿಂದಲೇ ಆಗುತ್ತಿವೆ ಎನ್ನುವುದು ಸತ್ಯ ಸಂಗತಿ. ಎಲ್ಲಾ ಹುನ್ನಾರಗಳು ಧರ್ಮ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ನಡೆಯುತ್ತಿರುವುದು ಸಾಬೀತಾಗಿದೆ. ಧಾರ್ಮಿಕ ಚೌಕಟ್ಟನ್ನು ಮೀರಬಾರದು, ಒಂದು ವೇಳೆ ಮೀರಿದರೆ ತಕ್ಕ ಪರಿಣಾಮ ಎದುರಿಸಬೇಕಾದೀತು ಎಂಬ ಭಯ ಹುಟ್ಟುಹಾಕುವಲ್ಲಿ ಇಲ್ಲಿನ ಕೋಮುವಾದಿ ಶಕ್ತಿಗಳು ಯಶಸ್ವಿಯಾಗಿವೆ ಎಂಬುದು ತನಿಖೆಯಿಂದ ದೃಢಪಟ್ಟಿದೆ.

ಜಿಲ್ಲೆಯಲ್ಲಿ ಹಿಂದೂ ಮತ್ತು ಮುಸಲ್ಮಾನ ಯುವಕ – ಯುವತಿಯರು / ಹೆಣ್ಣು – ಗಂಡುಗಳು ಪರಸ್ಪರ ಮಾತನಾಡುವುದೇ ಮಹಾಪರಾಧ. ಇದು ಕೇವಲ ಪ್ರೇಮಿಗಳಿಗಷ್ಟೇ ಸೀಮಿತವಾಗದೇ, ಜನಸಾಮಾನ್ಯರೆಲ್ಲರಿಗೂ ಅನ್ವಯವಾಗುವ ನೀತಿಸಂಹಿತೆಯಾಗಿ ಮಾರ್ಪಟ್ಟಿದೆ. ಈ ನೀತಿಗಳನ್ನು ಪರಿಪಾಲಿಸುವಂತೆ ನೋಡಿಕೊಳ್ಳುವ ಸಲುವಾಗಿ ಕಾವಲುಪಡೆಗಳನ್ನು ರಚಿಸಿಕೊಳ್ಳಲಾಗಿದೆ. ಇಂತಹ ಸ್ವಘೋಷಿತ ಕಾವಲುಪಡೆ ತನ್ನದೇ ಆದ ವ್ಯಾಪಕ ಜಾಲವನ್ನು ಕಟ್ಟಿಕೊಂಡು ಯಾರು ಯಾರ ಜೊತೆ ಮಾತನಾಡುತ್ತಾರೆ? ಇವರು ಯಾವ ಧರ್ಮಕ್ಕೆ ಸೇರಿದವರು? ಎಲ್ಲಿ ಕುಳಿತುಕೊಳ್ಳುತ್ತಾರೆ? ಎಲ್ಲಿ ಭೇಟಿಯಾಗುತ್ತಾರೆ? ಯಾವ ಉಡುಪು ಧರಿಸಿರುತ್ತಾರೆ? ಇವರು ಪ್ರೀತಿಸುತ್ತಿರುವರೆ? ಮದುವೆಯಾಗುವ ತಯಾರಿ ನಡೆಸಿದ್ದಾರೆಯೇ? ಮುಂತಾದವುಗಳನ್ನು ನಿರಂತರವಾಗಿ ಗಮನಿಸುತ್ತಿರುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಸಾಮಾನ್ಯವಾಗಿ ಸಂಭವಿಸುವ ಎಲ್ಲವನ್ನೂ ಗಮನಿಸಲಾಗುತ್ತದೆ. ಬಹಳ ಪ್ರಮುಖವಾಗಿ ಹಿಂದೂ ಮಹಿಳೆಯರ ಉಡುಪು, ಚಲನವಲನಗಳನ್ನು ಬಹಳ ಎಚ್ಚರಿಕೆ ಮತ್ತು ಗಂಭೀರತೆಯಿಂದ ಗಮನಿಸಿ ಮಹಿಳೆಯ ವೈಯಕ್ತಿಕ ವಿಷಯಗಳನ್ನು ನಿಯಂತ್ರಿಸುವ ಕಾರ್ಯಕ್ಕೂ ಕೈ ಹಾಕಿದ್ದಾರೆ ಎನ್ನುವುದು ಖಾತ್ರಿಯಾಗಿದೆ.

ಸಂಸ್ಕೃತಿ, ನೀತಿ, ನೈತಿಕತೆಯ ಹೊಣೆ ಹೊತ್ತ ಈ ಸ್ವಘೋಷಿತ ರಕ್ಷಣಾ ಕಾವಲು ಪಡೆಯ ನಿಗಾ ಯುವ ಜನಾಂಗದ ಮೇಲೆ ಹೆಚ್ಚು. ಷೇಫಾನಮಂಡೆ ಎಂಬ 16 ವರ್ಷದ ಬಾಲಕ ಹಿಂದೂ ಯುವತಿಯ ಜೊತೆ ಮಾತನಾಡಿದ್ದಕ್ಕೆ ಹಲ್ಲೆಗೊಳಗಾಗುತ್ತಾನೆ. ಕಾಲೇಜು ವಿದ್ಯಾರ್ಥಿಗಳು ಸಹಪಾಠಿಗಳಾದ 23 ವರ್ಷದ ಅನಿಶ್ವತಿ, 24ರ ಶಕೀಲ್ ಅಹ್ಮದ್ ಮತ್ತು 23 ವರ್ಷದ ಪ್ರಮೀಳ ಎಂಬ ವಿದ್ಯಾರ್ಥಿಗಳು ಕಾಲೇಜು ಸಮೀಪ ತಂಪು ಪಾನೀಯ ಕುಡಿಯುತ್ತಿದ್ದಾಗ ಹಲ್ಲೆಗೊಳಗಾಗಿರುವುದು ವರದಿಯಾಗಿದೆ. ಇವೆಲ್ಲವನ್ನು ಗಮನಿಸಿದಾಗ ಯುವ ಪೀಳಿಗೆ ಸಂಸ್ಕೃತಿ ರಕ್ಷಣೆ ಮತ್ತು ನೈತಿಕತೆ ಹೆಸರಿನಲ್ಲಿ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಸಂವಿಧಾನಬದ್ಧವಾದ ಭ್ರಾತೃತ್ವ ಭಾವನೆ ರೂಪಿಸಿ ಜಾತ್ಯತೀತ ಭಾರತ ನಿರ್ಮಾಣ ಮಾಡಬೇಕಾದ ಯುವಪೀಳಿಗೆ ಈ ದೌರ್ಜನ್ಯದಿಂದ ತತ್ತರಿಸುತ್ತಿದೆ. ಕಂದಾಚಾರಯುಕ್ತ ಯಜಮಾನ ಸಂಸ್ಕೃತಿಯತ್ತ ಮುಖಮಾಡುವಂತೆ ಅವರನ್ನು ಒತ್ತಾಯಿಸಲಾಗುತ್ತಿದೆ.

ಈ ಎಲ್ಲಾ ವಿದ್ಯಮಾನಗಳಿಂದ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಇವೆಲ್ಲಾ ಹೇಗಾಗುತ್ತಿವೆ ಎಂಬುದು ಮೊದಲ ಪ್ರಶ್ನೆ. ಹೊಟೇಲ್, ಬಸ್‌ನಿಲ್ದಾಣ, ಹಣ್ಣಿನರಸದ ಅಂಗಡಿಗೆ ಬರುವ ಯುವಕ ಯುವತಿಯ ಹಿನ್ನೆಲೆ, ಧರ್ಮ ಮುಂತಾದವುಗಳು ಇವರಿಗೆ ಹೇಗೆ ದೊರೆಯುತ್ತವೆ? ವಿವಿಧ ಧರ್ಮಗಳ ಯುವಕ ಯುವತಿಯರ ಸಂಪರ್ಕ ಮತ್ತು ಸಂವಾದಗಳು ಇವರಿಗೆ ಅರಿವಾಗುವುದಾದರೂ ಹೇಗೆ? ಎಂಬುದನ್ನು ಗಮನಿಸಿದಾಗ ಮಂಗಳೂರಿನಲ್ಲಿ ಈ ಕಾವಲು ಪಡೆಯ ಇಡೀ ಜಾಲವೇ ಬಿಚ್ಚಿಕೊಳ್ಳುತ್ತದೆ. ಇವರದೇ ಆದ ಗುಪ್ತಚರ ಜಾಲಗಳಿವೆ. ಖಾಸಗೀ ಬಸ್ ಚಾಲಕರು, ಟೈಂ ಕೀಪರ್ ಮತ್ತು ಕ್ಲೀನರ್‌ಗಳೇ ಈ ಜಾಲದ ಪ್ರಥಮ ಮಾಹಿತಿದಾರರು. ಮಾಹಿತಿ ಸಂಗ್ರಹಿಸುವ ಈ ತಂಡ ಮಾಹಿತಿಯನ್ನು ಕೂಡಲೇ ಭಜರಂಗದಳ ಪಡೆಗೆ ರವಾನಿಸುತ್ತದೆ. ಹೀಗಾಗಿ ಇವರ ಗುಪ್ತ ಅಂತರ್‌ಜಾಲ ಇಡೀ ಮಂಗಳೂರು ಜಿಲ್ಲೆಯಾದ್ಯಂತ ಕಾರ್ಯಪ್ರವೃತ್ತವಾಗಿದೆ.

ಸಾಮಾಜಿಕ ನೀತಿ, ಅದರ ಅನುಷ್ಠಾನ, ಉಲ್ಲಂಘನೆಗಳಾದಾಗ ಸಾಮಾನ್ಯವಾಗಿ ಸಮಾಜ ಅವುಗಳನ್ನು ಗಮನಿಸಿ ತನ್ನದೇ ಆದ ರೀತಿಯಲ್ಲಿ ನಿಭಾಯಿಸುತ್ತದೆ. ಆದರೆ ದಕ್ಷಿಣ ಕನ್ನಡದ ಇಂದಿನ ಪರಿಸ್ಥಿತಿಯೇ ಬೇರೆ. ಸಂಸ್ಕೃತಿ–ನೈತಿಕತೆಯ ಸಂರಕ್ಷಣಾ ಕಾವಲು ಪಡೆ ಸ್ವ–ಗುತ್ತಿಗೆ ಪಡೆದು ನೀತಿ ಉಲ್ಲಂಘನೆ ಮಾಡಿದವರನ್ನು ತಾನೇ ಶಿಕ್ಷಿಸುವ ಮಟ್ಟಕ್ಕೆ ಹೋಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಜರಂಗದಳ ಎಂದು ಕರೆದುಕೊಳ್ಳುವ ಈ ಗುಂಪು ತನಗಿಷ್ಟ ಬಂದ ರೀತಿಯಲ್ಲಿ ಶಿಕ್ಷಿಸುವ ದಂಡಿಸುವ ಅಧಿಕಾರನ್ನು ತನಗೆ ತಾನೇ ಪಡೆದುಕೊಂಡಿದೆ. ಯಾವುದು ನೀತಿ, ಅನೀತಿ ಎಂಬುದನ್ನು ಈ ತಂಡವೇ ನಿರ್ಧರಿಸಿ ಶಿಕ್ಷಿಸುತ್ತದೆ.

ಈ ವಿದ್ಯಮಾನಗಳ ಬಗ್ಗೆ ಪೊಲೀಸರ ಗಮನ ಸೆಳೆದಾಗ ಅವರ ಪ್ರತಿಕ್ರಿಯೆಯೇ ಬೇರೆ. 'ನೀತಿ, ನಿಯಮಗಳು ಉಲ್ಲಂಘನೆಯಾದರೆ ಯಾರೇ ಆದರೂ ಕಾನೂನು ರೀತಿಯ ದೂರು ಕೊಡಬಹುದು. ಅದನ್ನು ನಾವು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ನೀವು ಸಹ ದೂರು ಕೊಡಬಹುದು' ಎನ್ನುವ ಹಾರಿಕೆ ಉತ್ತರ. ಸಂವಿಧಾನ ಬದ್ಧವಾಗಿ ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದ ಮಂಗಳೂರಿನ ಇಡೀ ಪೊಲೀಸ್ ವ್ಯವಸ್ಥೆಯೇ ಭಜರಂಗದಳದ ನೀತಿಪಾಠಕ್ಕೆ ತಕ್ಕಂತೆ ತಾಳ ಹಾಕುತ್ತಾ, ಸಹಕರಿಸುತ್ತಾ ಅವರಿಂದ ದೂರು ಪಡೆದು ಪರಿಶೀಲಿಸದೇ, ಅದನ್ನೇ ಎತ್ತಿ ಹಿಡಿದು, ಅವರು ದಂಡಿಸಿದರೆ ಅದನ್ನೂ ಪ್ರಶ್ನಿಸದೇ ಹಲ್ಲೆ ಅಥವಾ ದಂಡನೆಗೊಳಗಾದವರ ಮೇಲೆಯೇ ಕ್ರಮ ಕೈಗೊಂಡು ಪೀಡಿಸುವ ಹಂತ ತಲುಪಿದೆ. ದೈಹಿಕ ಹಾಗೂ ಮಾನಸಿಕ ಕಿರುಕುಳ / ದಂಡನೆಗಳು ಸಾರ್ವಜನಿಕವಾಗಿ ನಡೆಯುತ್ತಿದ್ದರೂ, ಪ್ರಚಾರವಾಗುತ್ತಿದ್ದರೂ ಪೊಲೀಸ್ ವ್ಯವಸ್ಥೆ ಅವುಗಳಿಗೆ ಸ್ಪಂದಿಸದೇ ನಿಷ್ಕ್ರಿಯವಾಗಿದೆ. ಇಂತಹ ಸಂದರ್ಭದಲ್ಲಿ ಹಿಂಸೆ / ದಮನಕ್ಕೊಳಗಾದವರು ತಿರುಗಿ ಬಿದ್ದರೆ ಸಂಭವಿಸಬಹುದಾದ ಅನಾಹುತವನ್ನು ಈಗಲೇ ಅರಿಯಬೇಕಿದೆ. ಹೊಡೆದಾಟ, ಬಡಿದಾಟ ಲೈಂಗಿಕ ಕಿರುಕುಳಗಳೇ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಜಾಗರೂಕತೆಯಿಂದ ಈ ವಿದ್ಯಮಾನಗಳನ್ನು ನಿಭಾಯಿಸುವ ಹೊಣೆ ಪೊಲೀಸ್ ವ್ಯವಸ್ಥೆಯ ಮೇಲಿದೆ.

ಇಡೀ ವಿದ್ಯಮಾನಗಳ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿರುವ ಘಟನೆಗಳ ಬಗ್ಗೆ ನಾವು ಗಮನಹರಿಸಿ ಪರಿಶೀಲಿಸಿದಾಗ, ಮಾಧ್ಯಮಗಳೂ ಸಹ ಸ್ವಘೋಷಿತ ನೀತಿನಿಯಂತ್ರಕ ಕಾವಲುಪಡೆಯೊಡನೆ ಸಹಕರಿಸಿರುವಂತೆ ಗೋಚರಿಸುತ್ತದೆ. ಅವರ ವರದಿಗಳೇ ರೋಚಕವಾಗಿರುತ್ತವೆ. ಉದಾಹರಣೆಗೆ "ಅನೈತಿಕ ಚಟುವಟಿಕೆಯಲ್ಲಿ ತೊಡಗಿರುವ ತರುಣ – ತರುಣಿಯರನ್ನು ರೆಡ್‌ಹ್ಯಾಂಡ್ ಆಗಿ ಹಿಡಿದ" "ಮಜಾ ಉಡಾಯಿಸಲು ಬಂದ", "ರಾಸಲೀಲೆ", "ಚಕ್ಕಂದ' ಆಡುತ್ತಿದ್ದ" ಮುಂತಾದ ಶೀರ್ಷಿಕೆಗಳನ್ನು ಹೊತ್ತ ಸಂಸ್ಕೃತಿ–ನೈತಿಕತೆ ಲೇಪನದ ವರದಿಗಳು ಭಜರಂಗದಳಕ್ಕೇ ಉತ್ತೇಜನಕಾರಿಯಾಗಿವೆ. ಅದರಲ್ಲೂ ಪ್ರಮುಖವಾಗಿ ಹಿಂದೂ ಹುಡುಗಿ–ಮುಸ್ಲಿಂ ಹುಡುಗರು ಮಾತನಾಡುತ್ತಿದ್ದರೆ ಅದು ಅನೈತಿಕ ವಿಷಯವಾಗಿ ಪರಿವರ್ತಿತವಾಗಿ ಅದರ ಆಧಾರದ ಮೇಲೆ ದಂಡನೆ ನಿರ್ಣಯವಾಗುತ್ತದೆ. ದಂಡನೆಗಳು ನಡೆದಾಗ ಮಾಧ್ಯಮಗಳು ಅವುಗಳನ್ನು ಚಿತ್ರಿಸುವಲ್ಲಿ ನಿರತವಾಗಿರುತ್ತವೆಯೇ ಹೊರತು ಭಜರಂಗದಳಕ್ಕಿರುವ ಸಂವಿಧಾನ ದತ್ತ ಅಧಿಕಾರವೇನು ಎನ್ನುವ ಬಗ್ಗೆ ವರದಿ ಮಾಡಿಲ್ಲ.

ಈ ಎಲ್ಲಾ ವಿದ್ಯಮಾನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ವಾತಾವರಣವೇ ಬದಲಾಗಿದೆ. ಸಾಮಾನ್ಯ ಜನರಲ್ಲಿ ಅಭದ್ರತೆ ಮತ್ತು ಭಯ ಕಾಡುತ್ತಿದೆ. ಯಾವುದಾದರೂ ಸಭೆ, ಸಮಾರಂಭ, ಔತಣಕೂಟ, ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಹೋಟೇಲ್ ಮುಂತಾದವುಗಳಿಗೆ ಹೋಗುವ ಮೊದಲು ಹೋಗುವುದೇ ಬೇಡವೇ ಎಂದು ಚಿಂತಿಸುವ ಸನ್ನಿವೇಶ ನಿರ್ಮಾಣವಾಗಿದೆ. ಇಷ್ಟಕ್ಕೇ ನಿಲ್ಲದ ಆತಂಕಗಳು, ಸಮುದಾಯ ಸಮುದಾಯಗಳ ಮಧ್ಯೆ ಜಗಳ, ವೈಷಮ್ಯಕ್ಕೆ ಕಾರಣವಾಗುತ್ತಿವೆ. ಯಾರಿಗೆ ಉದ್ಯೋಗ ಕೊಡಬೇಕು ಕೊಡಬಾರದು ...... ಹೀಗೆ ಮಂಗಳೂರಿನ/ ಜಿಲ್ಲೆಯ ಪ್ರತಿಷ್ಠೆಗೆ ಧಕ್ಕೆ ತರುವ ಹಲವಾರು ನಿದರ್ಶನಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆ ಹೆಸರಾಂತ ಶೈಕ್ಷಣಿಕ ಕೇಂದ್ರ ಎಂಬ ಜನಪ್ರಿಯತೆ ಪಡೆದಿದೆ. ಇದರ ಮೇಲೂ ಸಹ ಕೆಟ್ಟಪರಿಣಾಮ ಉಂಟಾಗಿರುವುದು ಆತಂಕಕಾರಿ ಬೆಳವಣಿಗೆ.

ಈ ರೀತಿಯ ಎಲ್ಲಾ ಕಾರ್ಯಾಚರಣೆಗಳೂ ಸಂವಿಧಾನದ ಭ್ರಾತೃತ್ವ ಪರಿಕಲ್ಪನೆಗೆ ಆಘಾತ ಉಂಟು ಮಾಡುತ್ತವೆ. "ಭಾರತೀಯರಾದ ನಾವು" ಎಂದು ಹೇಳಿಕೊಳ್ಳುವ ನಮ್ಮತನ ಮತ್ತು ಸಂವಿಧಾನದ ಮೂಲ ಆಶಯಗಳನ್ನು ನಾಶ ಮಾಡುತ್ತಿವೆ.

ಸಂಸ್ಕೃತಿ ಮತ್ತು ನೈತಿಕತೆಯ ನೆಪಮಾಡಿಕೊಂಡ ಕೇವಲ ಕೆಲವೇ ಜನರ ಕಾವಲುಪಡೆಯಿಂದಾಗಿ ಸಮಾಜದಲ್ಲಿ ತಾರತಮ್ಯಗಳು ಉಂಟಾಗಿ, ಸಾಮಾಜಿಕ ವಿಘಟನೆಗಳು ಸಂಭವಿಸುತ್ತಿವೆ. ನಿರ್ದಿಷ್ಟ ಆಚಾರ, ವಿಚಾರ, ಉಡುಪು, ಭಾಷೆ, ಶೈಲಿ ಮುಂತಾದವುಗಳನ್ನು ಸೂಚಿಸಿ ಸಂಕೀರ್ಣ ಸಮಾಜದ ರಚನೆಗೆ ದಾರಿಮಾಡಲಾಗುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಈ ರೀತಿಯ ತಾರತಮ್ಯಗಳೇರ್ಪಟ್ಟು ಅದಕ್ಕಾಗಿ ತಕ್ಕ ಬೆಲೆ ತೆತ್ತ ಪಾಠಗಳು ನಮ್ಮ ಮುಂದಿವೆ. ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಸಮುದಾಯ ವಿಭಜಕ ಕಾರ್ಯಾಚರಣೆಗಳು ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು

ಬುಡಮೇಲು ಮಾಡುತ್ತವೆ, ಅರಾಜಕತೆ ಉಂಟಾಗಿ ಕೊಲೆ, ದರೋಡೆ, ಹಿಂಸಾಚಾರಗಳು ಭುಗಿಲೇಳುತ್ತವೆ ಎಂಬುದಕ್ಕೆ ದಕ್ಷಿಣಕನ್ನಡ ಜಿಲ್ಲೆಯೇ ಸಾಕ್ಷಿ.

ಜನತಂತ್ರವಾದಿ ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲಾ ನಾಗರಿಕರು ಎಚ್ಚರಗೊಂಡು, ಕಾರ್ಯಪ್ರವೃತ್ತರಾಗಿ ಜನತಂತ್ರ ಉಳಿಸಬೇಕಿದೆ.

ಪ್ರಮುಖ ಶಿಫಾರಸ್ಸುಗಳು:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂವಿಧಾನ ಬದ್ಧ ಜನತಂತ್ರ ವ್ಯವಸ್ಥೆ ಮರುಸ್ಥಾಪಿಸಲು, ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸತ್ಯಶೋಧನ ಸಮಿತಿ ಈ ಕೆಳಗಿನ ಶಿಫಾರಸ್ಸುಗಳನ್ನು ಸಮಾಜದ/ಸರಕಾರದ ಮುಂದಿಟ್ಟಿದೆ.

ಸರಕಾರ ಕೈಗೊಳ್ಳಬೇಕಾದ ತುರ್ತು ಕ್ರಮಗಳು

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂವಿಧಾನ ಬದ್ಧವಾದ ಆಡಳಿತ ಮತ್ತು ಕಾನೂನು ವ್ಯವಸ್ಥೆ ಕುಸಿದು ಬಿದ್ದಿರುವುದನ್ನು ಸರಕಾರ ಈಗಲಾದರೂ ಗಮನಿಸಿ, ಅದನ್ನು ಪುನರ್ ಸ್ಥಾಪಿಸುವ ಕ್ರಮವನ್ನು ಕೂಡಲೇ ಕೈಗೊಳ್ಳುವುದು.
2. ಸರಕಾರದ ಆಡಳಿತ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆಯಾಗಿ ಕಾನೂನು ಬಾಹಿರವಾಗಿ ಕಾರ್ಯಾಚರಣೆಗಿಳಿದಿರುವ ಭಜರಂಗದಳ, ಹಿಂದೂ ಜಾಗರಣ ವೇದಿಕೆ, ಹಿಂದೂ ಜಾಗರಣ ಸಮಿತಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು, ಶ್ರೀರಾಮಸೇನೆ ಮುಂತಾದವುಗಳು ನಡೆಸುತ್ತಿರುವ ದಾಂಧಲೆ, ಪುಂಡಾಟಿಕೆಗಳನ್ನು ಹತ್ತಿಕ್ಕುವ ಕೆಲಸ ಕೂಡಲೇ ಆಗಬೇಕಿದೆ. ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳ ಪ್ರಕಾರ ಈ ಗುಂಪುಗಳ ಮೇಲೆ ಕೇಸು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು ಸರಕಾರದ ಆದ್ಯ ಕರ್ತವ್ಯ.
3. ಮೇಲಿನ ಗುಂಪುಗಳು ಸೂಚಿಸುವ ಸಾಂಸ್ಕೃತಿಕ ನೀತಿ, ನೈತಿಕತೆ ಅಥವಾ "ದಂಡ ಸಂಹಿತೆ" ಮುಂತಾದವುಗಳು ಸಂವಿಧಾನಬಾಹಿರ. ಇಂತಹ ಕೃತ್ಯಗಳನ್ನು ಸರಕಾರ ಕೂಡಲೇ ಹತ್ತಿಕ್ಕಿ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು.
4. ಶೈಕ್ಷಣಿಕ ಸಂಸ್ಥೆಗಳಲ್ಲಿ ABVP ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ದುರ್ಬಳಕೆ ಮಾಡಿಕೊಂಡು ಕೋಮು ಸಾಮರಸ್ಯ ಕೆಡಿಸುವ ಸಂವಿಧಾನ ಬಾಹಿರ ಕೃತ್ಯ ಎಸಗುತ್ತಿರುವ ಕ್ರಮವನ್ನು ಪ್ರತಿಬಂಧಿಸಿ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ತುರುಕಲಾಗುತ್ತಿರುವ ಇವರ ತಾತ್ವಿಕ ಪ್ರತಿಪಾದನೆಯನ್ನು ನಿಷೇಧಿಸುವುದು.
5. ಚಿಕ್ಕಮಗಳೂರಿನಲ್ಲಿ ದಾಂಧಲೆ ನಡೆಸಿದರೆಂಬ ಆಪಾದನೆಗಳಿಂದ ದಾಖಲಾಗಿರುವ 11 ವಿವಿಧ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆದಿರುವ ಸರಕಾರದ ಕ್ರಮ ಸರಿಯಲ್ಲ. ಈ ಎಲ್ಲಾ ಮೊಕದ್ದಮೆಗಳು ನ್ಯಾಯಾಲಯದಲ್ಲಿ ಇತ್ಯರ್ಥಗೊಳ್ಳುವಂತಾಗಲು ಸರಕಾರ ತಾನು ನೀಡಿದ್ದ ಆದೇಶವನ್ನು ಕೂಡಲೇ ಹಿಂತೆಗೆದುಕೊಳ್ಳುವುದು.
6. ಎಲ್ಲಾ ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು ಯಾವುದೇ ಭಯವಿಲ್ಲದೆ ಚಲಾಯಿಸುವ ವಾತಾವರಣ ನಿರ್ಮಾಣ ಮಾಡುವುದು. ಎಲ್ಲಾ ನಾಗರಿಕರು ಸಂವಿಧಾನ ದತ್ತವಾದ ಸಮಾನತೆ, ಸಹೋದರತೆ, ಸ್ವಾತಂತ್ರ್ಯದಿಂದ ಗೌರವಯುತವಾಗಿ ಬದುಕುವ ಹಕ್ಕನ್ನು ಅನುಭವಿಸುವ ವಾತಾವರಣ ನಿರ್ಮಿಸುವುದು.
7. ಧಾರ್ಮಿಕ ಕಟ್ಟುಪಾಡುಗಳನ್ನು ಮೀರಿದ ಪ್ರೀತಿ, ವಿಶ್ವಾಸ, ಸೌಹಾರ್ದಯುತವಾಗಿ ಬದುಕು ಸಾಗಿಸಲು ಪೂರಕವಾದ ಸಂವೇದನೆ ಸೃಷ್ಟಿಸುವುದು. ಧರ್ಮ, ಜಾತಿ, ಲಿಂಗ ಆಧರಿತ ತಾರತಮ್ಯವಿಲ್ಲದ ಬದುಕನ್ನು ಕಲ್ಪಿಸಿಕೊಳ್ಳುವ, ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನಾಗರಿಕರಿಗೆ ಲಭ್ಯವಾಗುವಂತೆ ವಾತಾವರಣ ಸೃಷ್ಟಿಸುವುದು.
8. ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ತಮಗೆ ಬೇಕಾದ ರೀತಿಯಲ್ಲಿ ಆಚರಿಸಿಕೊಳ್ಳುವ ಸ್ವಾತಂತ್ರ್ಯ ಎಲ್ಲಾ ನಾಗರಿಕರಿಗೆ ದೊರೆಯುವಂತಾಗಬೇಕು.
9. ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದ ಹಾಗೆ, ಅವರಿಗೆ ಬೇಕಾದ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಬದುಕುವ ಅವಕಾಶವಿರಬೇಕು.
10. ಧಾರ್ಮಿಕ ಮತ್ತು ಸಾಂಸ್ಕೃತಿಕ ನೈತಿಕತೆಯ ಕುರಿತ ಸಂಘರ್ಷಗಳನ್ನು ವಿದ್ಯಾರ್ಥಿ ಸಮುದಾಯಗಳ ಮೇಲೆ ಒತ್ತಾಯಪೂರ್ವಕವಾಗಿ ಹೇರಿ ಘರ್ಷಣೆ ಉಂಟುಮಾಡದಂತೆ ಎಚ್ಚರಿಕೆ ವಹಿಸುವುದು.
11. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲನೆಯಲ್ಲಿರುವ ಭಯಭೀತ ವಾತಾವರಣವನ್ನು ತಿಳಿಗೊಳಿಸುವ ಕ್ರಮವನ್ನು ಕೂಡಲೇ ಕೈಗೊಳ್ಳುವುದು.

ದಕ್ಷಿಣ ಕನ್ನಡ ಜಿಲ್ಲಾಡಳಿತಕ್ಕೆ ಶಿಫಾರಸ್ಸುಗಳು

1. ನಿಷ್ಕ್ರಿಯವಾಗಿರುವ ಜಿಲ್ಲಾಡಳಿತ ಮತ್ತೆ ಜಾಗೃತಿಗೊಂಡು ಜಿಲ್ಲೆಯ ಶಾಂತಿ-ಸೌಹಾರ್ದ ಕಾಪಾಡಲು ಪೂರಕವಾದ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು.



2. ಕೋಮು ದಳ್ಳುರಿ ಉಂಟುಮಾಡುತ್ತಿರುವ, ಅಪರಾಧಿ ಹಿನ್ನೆಲೆಯುಳ್ಳವರನ್ನು, ನೈತಿಕತೆ, ಸಂಸ್ಕೃತಿ ಹೆಸರಿನಲ್ಲಿ ಭಯೋತ್ಪಾದನೆಯಲ್ಲಿ ತೊಡಗಿರುವವರನ್ನು ಗುರುತಿಸಿ ಕಠಿಣ ಕ್ರಮ ಕೈಗೊಳ್ಳುವುದು ಅಥವಾ ಅವರಿಂದ ಮುಚ್ಚಳಿಕೆ ಬರೆಸಿಕೊಂಡು ಅವರ ಮೇಲೆ ನಿರಂತರ ನಿಗಾ ಇಡುವ ಮೂಲಕ ಅವರ ಮೇಲೆ ನಿಯಂತ್ರಣ ಸಾಧಿಸುವುದು.
3. ವಿವಿಧ ದಾಂಧಲೆ, ಹಿಂಸಾಚಾರದಲ್ಲಿ ನಿರಂತರವಾಗಿ ತೊಡಗಿರುವ, ಸಮಾಜದಲ್ಲಿ ಶಾಂತಿಭಂಗ ಮಾಡುತ್ತಿರುವ ಕಿಡಿಗೇಡಿಗಳನ್ನು ಗುರುತಿಸಿ ಗಡಿಪಾರು ಮಾಡುವ ಮುಖಾಂತರ ಪರಿಸ್ಥಿತಿಯನ್ನು ನಿಯಂತ್ರಿಸುವುದು.
4. ನಾಗರಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಸ್ವಯಂಘೋಷಿತ ನೀತಿ ಸಂರಕ್ಷಕ ನಾಯಕರ ಕಾನೂನುಬಾಹಿರ ಕಾರ್ಯಾಚರಣೆಗಳನ್ನು ಗಮನಿಸಿ ಕೂಡಲೇ ಪೊಲೀಸರಿಗೆ/ಠಾಣೆಗಳಿಗೆ ತಿಳಿಸುವಂತೆ ಜನಾಭಿಪ್ರಾಯ ಮೂಡಿಸು

ವುದು. ಕಾನೂನು ಸುವ್ಯವಸ್ಥೆ ಕಾಪಾಡುವುದನ್ನು ಪೊಲೀಸ್ ಇಲಾಖೆಗೆ ಮಾತ್ರ ಸೀಮಿತಗೊಳಿಸುವುದು.

5. ಸಾಂಸ್ಕೃತಿಕ ಅಥವಾ ನೈತಿಕತೆಯ ಹೆಸರಿನಲ್ಲಿ ನಡೆಯುತ್ತಿರುವ ವಿಚಿತ್ರ ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ವರಿಷ್ಠಾಧಿಕಾರಿ ಕೂಡಲೇ ಭೇಟಿ ನೀಡಿ ವಿವರ ಪಡೆದು ಘಟನೆಗಳ ಗಂಭೀರತೆಗೆ ತಕ್ಕ ಕಾನೂನು ಕ್ರಮ ಕೈಗೊಳ್ಳುವುದು.
6. ಜಿಲ್ಲಾಧಿಕಾರಿ ಕಛೇರಿಯಲ್ಲಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸಿ ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಮತ್ತು ಸಾರ್ವಜನಿಕರಿಂದ ಬರುವ ಅಹವಾಲುಗಳನ್ನು ಸ್ವೀಕರಿಸುವುದು, ಆಲಿಸುವುದು, ಸಕಾರಾತ್ಮಕವಾಗಿ ಸ್ಪಂದಿಸುವುದು ಮತ್ತು ವಿವಾದಗಳನ್ನು ಇತ್ಯರ್ಥಗೊಳಿಸುವ ಕೆಲಸ ಆದ್ಯತೆಯ ಮೇಲೆ ಕೈಗೊಳ್ಳುವುದು.
7. ಜಿಲ್ಲಾಡಳಿತ ತನ್ನ ಅಧೀನದ ಅಧಿಕಾರ ವ್ಯಾಪ್ತಿಯಲ್ಲಿರುವ ಸಂಪನ್ಮೂಲಗಳನ್ನು ಬಳಸಿ ಅಲ್ಪಸಂಖ್ಯಾತರಿಗೆ ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ನಾಗರಿಕರಲ್ಲಿ ನಂಬಿಕೆ, ಭರವಸೆ ಮೂಡಿಸುವುದು.
8. ಅಪರಾಧ ಹಿನ್ನೆಲೆಯುಳ್ಳ ಗುಂಪುಗಳು ಅಲ್ಪಸಂಖ್ಯಾತರ ಉದ್ಯೋಗ, ಆರ್ಥಿಕತೆಯನ್ನು ಬುಡಮೇಲು ಮಾಡುವ ಕೃತ್ಯಗಳನ್ನು ಗುರುತಿಸಿ ಅವರ ವಿರುದ್ಧ ಕ್ರಿಮಿನಲ್ ಕೇಸ್‌ಗಳು ದಾಖಲಾಗುವಂತೆ ಮಾಡುವುದು.

ಜಿಲ್ಲಾ ಪೊಲೀಸ್ ಆಡಳಿತಕ್ಕೆ ಶಿಫಾರಸ್ಸುಗಳು

1. ಸಂಸ್ಕೃತಿ, ನೀತಿ, ನೈತಿಕತೆ ಹೆಸರಿನಲ್ಲಿ ಪುಂಡಾಟಿಕೆ ನಡೆಸುವ, ದೌರ್ಜನ್ಯ, ಹಿಂಸಾಚಾರಗಳಲ್ಲಿ ತೊಡಗಿರುವ ವ್ಯಕ್ತಿ ಅಥವಾ ಗುಂಪುಗಳನ್ನು ಗುರುತಿಸಿ, ಬಂಧಿಸಿ, ಭಾರತೀಯ ದಂಡಸಂಹಿತೆಯ ವಿವಿಧ ಕಲಂಗಳ ಅನ್ವಯ ಕೇಸುಗಳನ್ನು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವ ಮೂಲಕ ನಾಗರಿಕರ ಹಕ್ಕುಗಳನ್ನು ಪೊಲೀಸರು ಸಂರಕ್ಷಣೆ ಮಾಡುವುದನ್ನು ಆದ್ಯತೆ ಮೇಲೆ ಕೈಗೊಳ್ಳಬೇಕಿದೆ.
2. ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಸುತ್ತೋಲೆಗಳನ್ನು ಕಳುಹಿಸಿ ಸಂಸ್ಕೃತಿ. ನೀತಿ, ನೈತಿಕತೆಯ ನೆಪಮಾಡಿ ಅಮಾಯಕರನ್ನು ಹೊಡೆಯುವ, ನಿಂದಿಸುವ, ದೌರ್ಜನ್ಯ ಮಾಡುವ, ಕಿರುಕುಳ ನೀಡುವ, ಹಿಂಸಿಸುವ, ಲೈಂಗಿಕ ಕಿರುಕುಳ ನೀಡುವವರನ್ನು ಗುರುತಿಸಿ ಕೇಸು ದಾಖಲಿಸಿ ಪ್ರಥಮ ಮಾಹಿತಿ ವರದಿ(FIR) ಸಿದ್ಧಗೊಳಿಸುವುದು ಮತ್ತು ಚಾರ್ಜ್‌ಷೀಟ್ ಹಾಕಿ ಮುಂದಿನ ಕ್ರಮ ಕೈಗೊಳ್ಳುವುದು.
3. ಮಂಗಳೂರು ನಾರ್ತ್ ಪೊಲೀಸ್ ಠಾಣೆ ವ್ಯಾಪ್ತಿಯ ಅಮ್ನೇಸಿಯ ಪಬ್ ಆಕ್ರಮಣ ಮತ್ತು ಬೆಳ್ತಂಗಡಿ ಪೊಲೀಸ್ ಠಾಣೆ ವ್ಯಾಪ್ತಿಯ ಮುಸ್ಲಿಂ ಯುವಕನ ಮೇಲಿನ ಆಕ್ರಮಣಗಳು ಅತ್ಯಂತ ಗಂಭೀರ ಸ್ವರೂಪದ ಪ್ರಕರಣಗಳಾಗಿವೆ. ಈ ಎರಡೂ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ FIR ಮತ್ತು ಚಾರ್ಜ್‌ಷೀಟ್‌ಗಳನ್ನು ದಾಖಲಿಸಿ ಕಾನೂನು ಕ್ರಮಕ್ಕೆ ಕೂಡಲೇ ಮುಂದಾಗುವುದು.
4. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾರ್ಯನಿರತರಾಗಿರುವ ಎಲ್ಲಾ ಪೊಲೀಸ್ ಸಿಬ್ಬಂದಿಗೆ ಕೋಮುವಾದದ ವಿವಿಧ ಮಜಲುಗಳು, ಅವರ ಸಂಚು ಮತ್ತು ಆಕ್ರಮಣಗಳ ಬಗ್ಗೆ ವಿಶೇಷ ತರಬೇತಿ ನೀಡಿ, ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಸೂಕ್ತ ಭದ್ರತೆ ನೀಡುವ ನಿಟ್ಟಿನಲ್ಲಿ ನಿಗಾವಹಿಸುವಂತೆ ಇಡೀ ಪೊಲೀಸ್ ವ್ಯವಸ್ಥೆಯನ್ನು ಸಜ್ಜುಗೊಳಿಸುವುದು.

ಶೈಕ್ಷಣಿಕ ಸಂಸ್ಥೆಗಳ ಜವಾಬ್ದಾರಿ ಕುರಿತು ಶಿಫಾರಸ್ಸುಗಳು

1. ಎಲ್ಲಾ ಹಂತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಅವರವರ ಧಾರ್ಮಿಕ ಹಿನ್ನೆಲೆಗಳಿಂದ ಗುರುತಿಸಿಕೊಳ್ಳುವ ಹಕ್ಕು, ಸ್ವಾತಂತ್ರ್ಯ ಮತ್ತು ತಮ್ಮ ತಮ್ಮ ಆಚರಣೆಗಳಿಗೆ ಅನುಸಾರವಾಗಿ ಬೇಕಾದ ಉಡುಪು ಧರಿಸುವ ಹಕ್ಕು ಲಭ್ಯವಾಗುವಂತೆ ನೋಡಿಕೊಳ್ಳುವುದು.
2. ಧರ್ಮ ಮತ್ತು ಲಿಂಗದ ಆಧಾರದ ಮೇಲೆ ಯಾವುದೇ ತಾರತಮ್ಯ ಆಗದಂತೆ, ಘರ್ಷಣೆಗಳು ಸಂಭವಿಸದಂತೆ ನೋಡಿಕೊಳ್ಳುವ ಮುಖಾಂತರ ವಿದ್ಯಾರ್ಥಿಗಳಲ್ಲಿ ಸಾಮರಸ್ಯ ಕಾಪಾಡುವುದು.
3. ಎಲ್ಲಾ ಖಾಸಗಿ ಮತ್ತು ಸರಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರು ಮತ್ತು ಯುವತಿಯರನ್ನು ಅವಹೇಳನಕಾರಿ ರೀತಿಯಲ್ಲಿ ನಡೆಸಿಕೊಳ್ಳುವ ವಾತಾವರಣ ಸೃಷ್ಟಿಮಾಡುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಕೂಡಲೇ ಶಿಸ್ತು ಕ್ರಮ ಕೈಗೊಳ್ಳುವ ಮೂಲಕ ಅಲ್ಪಸಂಖ್ಯಾತ ಮತ್ತು ಯವತಿಯರ ಸ್ವಾತಂತ್ರ್ಯ ಎತ್ತಿಹಿಡಿದು ಸಾಮರಸ್ಯ ಸಾಧಿಸುವುದು.

ನಾಗರಿಕ ಸಮಾಜ ಮತ್ತು ಸಾಮಾಜಿಕ ಸಂಘಟನೆಗಳಿಗೆ ಶಿಫಾರಸ್ಸುಗಳು

1. ಸಂಸ್ಕೃತಿ, ನೈತಿಕತೆಯ ನೆಪಮಾಡಿ ನಡೆಯುವ ಅಮಾನವೀಯ ವಿದ್ಯಮಾನಗಳ ಕುರಿತು ಕೂಡಲೇ ಪ್ರತಿಕ್ರಿಯೆ ನೀಡುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯ. ಸಾಮಾಜಿಕ ಸಂಘಟನೆಗಳು ಈ ನಿಟ್ಟಿನಲ್ಲಿ ಗಮನ ಹರಿಸಬೇಕಿದೆ.
2. ಇಡೀ ಸಮಾಜ ಕೋಮುವಾದೀಕರಣ ಆಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ ನಿಭಾಯಿಸುವ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಛಿದ್ರಗೊಳಿಸುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ಹುನ್ನಾರಗಳನ್ನು ಸೋಲಿಸುವುದು ಮತ್ತು ಅವರೂ ಇಂತಹ ಮಾನಸಿಕ ದೌರ್ಬಲ್ಯಗಳಿಂದ ಹೊರಬರಲು ಸೂಕ್ತ ಪರಿಹಾರ ಸೂಚಿಸುವ ಪ್ರಯತ್ನ ಮಾಡುವುದು.
3. ಬಹುಮುಖಿ ಸಂಸ್ಕೃತಿ ಮತ್ತು ಸಾಮರಸ್ಯ ಉಂಟುಮಾಡುವ ವಿವಿಧ ಜಾತಿ, ಧರ್ಮ, ಜನಾಂಗಗಳ ಮತ್ತು ಸಮುದಾಯದ ಪ್ರತಿನಿಧಿಗಳ ಸಹಯೋಗದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ದಕ್ಷಿಣ ಕನ್ನಡದಲ್ಲಿ ಈಗಾಗಲೇ ಆಗಿರುವ ಆಘಾತಗಳಿಂದ ಹೊರಬರುವಂತೆ ಮಾಡುವುದು.
4. ಸಾಂಸ್ಕೃತಿಕ, ನೀತಿ ಮತ್ತು ನೈತಿಕತೆ ಆಧಾರದ ಮೇಲೆ ವಿಭಜನೆಗೆ ಕಾರಣವಾಗುವವರನ್ನು ಸಾರ್ವಜನಿಕರು ಮತ್ತು ಸಾಮಾಜಿಕ ಸಂಘಟನೆಗಳೇ ನಿಯಂತ್ರಿಸುವ ಮತ್ತು ಸಂವಿಧಾನ ರಕ್ಷಿಸುವ ಕ್ರಮ ಕೈಗೊಳ್ಳುವುದು.
5. ಸಂಸ್ಕೃತಿ, ನೀತಿ ಮುಂತಾದ ಹೆಸರಿನಲ್ಲಿ ಯುವಕ ಯುವತಿಯರ ಭವಿಷ್ಯದ, ಬದುಕಿನ ಆಯ್ಕೆಯನ್ನು ನಿಯಂತ್ರಿಸಲು ಪ್ರಯತ್ನಿಸುವವರನ್ನು ವಿರೋಧಿಸುವ ಮೂಲಕ ಬದುಕಿನ ಆಯ್ಕೆಯ ಸ್ವಾತಂತ್ರ್ಯವನ್ನು ನಿರ್ಮಾಣ ಮಾಡುವುದು.

VI. ಇತರೆ ನಾಗರಿಕ ಹಕ್ಕುಗಳ ರಕ್ಷಣಾ ಸಂಸ್ಥೆಗಳಿಗೆ ಶಿಫಾರಸ್ಸುಗಳು


ಸಂವಿಧಾನದ ಚೌಕಟ್ಟಿನಲ್ಲಿ ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನ ಬದ್ಧವಾಗಿ ರಚಿಸಲಾಗಿರುವ ರಾಷ್ಟ್ರ ಮತ್ತು ರಾಜ್ಯಮಟ್ಟದ ವಿವಿಧ ಮಾನವ ಹಕ್ಕುಗಳ ಆಯೋಗಳು– ಪ್ರಮುಖವಾಗಿ ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ, ಅಲ್ಪಸಂಖ್ಯಾತರ ಆಯೋಗ, ಗಿರಿಜನರ

ಆಯೋಗ, ಹಿಂದುಳಿದ ವರ್ಗಗಳ ಆಯೋಗ ಹಾಗೂ ಕಾನೂನು ಸೇವಾ ಪ್ರಾಧಿಕಾರಗಳು ಕೆಳಗಿನ ಕ್ರಮ ಕೈಗೊಳ್ಳುವ ಮೂಲಕ ನಿರ್ಣಾಯಕ ಪಾತ್ರ ವಹಿಸಬೇಕಿದೆ.

1. ಮೇಲೆ ವಿವರಿಸಲಾದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮೇಲೆ ಸೂಚಿಸಿರುವ ಶಿಫಾರಸ್ಸುಗಳನ್ನು ಗಮನಿಸಿ ಎಲ್ಲಾ ವಿದ್ಯಮಾನಗಳನ್ನೂ ಗಂಭೀರವಾಗಿ ಪರಿಗಣಿಸಿ ಲಿಂಗ, ಧರ್ಮ, ಜಾತಿ, ಸಂಸ್ಕೃತಿ, ನೀತಿ ಮತ್ತು ನೈತಿಕತೆ ಆಧಾರದ ಮೇಲೆ ನಡೆಯುತ್ತಿರುವ ತಾರತಮ್ಯ ಮತ್ತು ದೌರ್ಜನ್ಯಗಳ ಕುರಿತು ನಿರಂತರ ನಿಗಾವಹಿಸುವುದು.
2. ಸಂಸ್ಕೃತಿ, ನೀತಿ, ನೈತಿಕತೆ ಆಧಾರದ ಮೇಲೆ ನಡೆಯುವ ವಿಚ್ಛಿದ್ರಕಾರಿ ಪ್ರಕರಣಗಳು ನಡೆದ ಸ್ಥಳಗಳಿಗೆ ಕೂಡಲೇ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿ ಖುದ್ದಾಗಿ ಮನನ ಮಾಡಿಕೊಳ್ಳುವುದು ಹಾಗೂ ಪ್ರಕರಣಗಳ ಕುರಿತು ಸತ್ಯಾಂಶ ಅರಿಯಲು ಸತ್ಯಶೋಧನ ಸಮಿತಿಗಳನ್ನು ನೇಮಿಸಿ ಘಟನೆಗಳ ಸಂಪೂರ್ಣ ವರದಿಗಳನ್ನು ತರಿಸಿಕೊಂಡು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಕೈಗೊಳ್ಳುವಂತೆ ಸರಕಾರಕ್ಕೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.

ಭಾರತೀಯ ಪ್ರೆಸ್ ಕೌನ್ಸಿಲ್‌ಗೆ ಶಿಫಾರಸ್ಸುಗಳು

1. ಸಂಸ್ಕೃತಿ, ನೀತಿ ಮತ್ತು ನೈತಿಕತೆ ಹಿನ್ನೆಲೆಯಲ್ಲಿ ಸುದ್ದಿಮಾಧ್ಯಮಗಳು ಪೂರ್ವಾಗ್ರಹಕ್ಕೆ ಒಳಗಾಗದೆ ಸತ್ಯಾಂಶಗಳನ್ನು ಸಂವಿಧಾನದ ಚೌಕಟ್ಟಿನಲ್ಲಿ ವರದಿ ಮಾಡುವಂತೆ ಎಲ್ಲಾ ಸುದ್ದಿಮಾಧ್ಯಮಗಳಿಗೆ ಸುತ್ತೋಲೆ ಕಳಿಸುವುದು ಮತ್ತು ಹಲ್ಲೆಗೊಳಗಾದವರ ದೃಷ್ಟಿಕೋನದಲ್ಲಿ ಸತ್ಯಾಂಶಗಳಿಂದ ಕೂಡಿದ ವರದಿ ಪ್ರಕಟಗೊಳ್ಳುವಂತೆ ನೋಡಿಕೊಳ್ಳುವುದು.
2. ಪೂರ್ವಾಗ್ರಹ ಪೀಡಿತ ಕೆಲವು ವರ್ಗ ಹಿತಾಸಕ್ತಿ ಹೊಂದಿದ ಪತ್ರಿಕೆಗಳು ಮತ್ತು ಸುದ್ದಿಮಾಧ್ಯಮಗಳು ಮಾಡುವ ಪ್ರಚೋದನಕಾರಿ ವರದಿಗಳನ್ನು ನಿಯಂತ್ರಿಸುವುದಲ್ಲದೆ, ವಿಚ್ಛಿದ್ರಕಾರಿ ವರದಿಗಳನ್ನು ಪ್ರಕಟಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು. ❑



'ನಮ್ಮ ಮಾನಸ' ವಿಶೇಷ ಸಂಚಿಕೆ ಬಿಡುಗಡೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾನಸ ಮಹಿಳಾ ವೇದಿಕೆ 'ನಮ್ಮ ಮಾನಸ' ವಿಶೇಷ ಸಂಚಿಕೆಯ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ: 9.3.2009ರಂದು ಸಂಜೆ ನಾಲ್ಕು ಗಂಟೆಗೆ ಕೆನರಾ ಬ್ಯಾಂಕ್ ಯೂನಿಯನ್ ಕಛೇರಿಯಲ್ಲಿ ಹಮ್ಮಿಕೊಂಡಿತು. ಕೋಲಾರದ ಜನಪದ ಹಾಡುಗಾರ ರಾಜಪ್ಪ ಹಾಗೂ ಗೆಳೆಯರಿಂದ ಕಾಶ್ಮೀರದ ಸೂಫಿ ಕವಯಿತ್ರಿ ಲಲ್ಲಾದೇವಿಯ ಹಾಡುಗಳೊಂದಿಗೆ ಕಾರ್ಯಕ್ರಮನ್ನು ಪ್ರಾರಂಭಿಸಲಾಯಿತು.

ಎಚ್.ಎಸ್. ಚಂಪಾವತಿಯವರು 'ನಮ್ಮ ಮಾನಸ' ಕುರಿತು ಮಾತನಾಡುತ್ತಾ ಮಾನಸದಂತಹ ಸಣ್ಣ ಪತ್ರಿಕೆ ಪ್ರಸ್ತುತ ಸಂದರ್ಭದಲ್ಲಿನ ಸಮಸ್ಯೆಗಳನ್ನು ವಿಶ್ಲೇಷಿಸುವಂತಹ ಪ್ರಯತ್ನವನ್ನು ನಿರಂತರವಾಗಿ ನಡೆಸಿಕೊಂಡು ಹೋಗುವ ಉದ್ದೇಶವನ್ನು ಹೊಂದಿದೆಯೆಂದರು.

ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮಾತನಾಡಿದ ಸಮಾಜ ಶಾಸ್ತ್ರಜ್ಞೆ ಸುಧಾಸೀತಾರಾಮನ್‌ರವರು ಮಹಿಳಾಚಳವಳಿ ಐತಿಹಾಸಿಕವಾಗಿ ರೂಪುಗೊಂಡ ಹಾದಿಯನ್ನು ಗುರುತಿಸಿದರು. ಹೆಚ್ಚುತ್ತಿರುವ ಕೋಮುವಾದ ಸಂದರ್ಭದಲ್ಲಿ ಇಂದು ನಮ್ಮೊಳಗಿನ ವ್ಯತ್ಯಾಸ ಹಾಗೂ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗೂಡುವುದು ಅನಿವಾರ್ಯವಾಗಿದೆಯೆಂದರು. 70ರ ದಶಕದ ಮಹಿಳಾಚಳವಳಿಯ ಸಂದರ್ಭದಲ್ಲಿ ಕಂಡುಬಂದ ಉತ್ಸಾಹ ಇಂದು ಕಡಿಮೆಯಾಗಿದೆಯೆ? ಎಂದು ಅವರು ಪ್ರಶ್ನಿಸಿದರು.

ಮುಂಬೈನಿಂದ ಬಂದಿದ್ದ ಸ್ತ್ರೀವಾದಿ ಚಿಂತಕಿ ಶ್ರೀಮತಿ ಅಪೂರ್ವ ಅವರು ಮಾತನಾಡುತ್ತ, ಇಂದು ಮಹಿಳಾ ಚಳವಳಿ ಲೈಂಗಿಕ ಕಾರ್ಯಕರ್ತೆಯರು ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನೂ ಗುರುತಿಸಿ ಸ್ಪಂದಿಸುತ್ತಿರುವುದು ಗಮನಾರ್ಹವೆಂದರು. ಇಂದು ಮಹಿಳೆಯರು ಅವರ ವಿಶಿಷ್ಟ ಸಮಸ್ಯೆಯ ಸುತ್ತ ಅವರೇ ಸಂಘಟಿತರಾಗುತ್ತಿರುವುದು ಸ್ವಾಗತಾರ್ಹವೆನ್ನುತ್ತ, ಇಂತಹ ಸಮಸ್ಯೆಗಳನ್ನು ಗುರುತಿಸಲು ಮಹಿಳಾ ಚಳವಳಿಗೆ ಇಷ್ಟು ವರ್ಷ ಬೇಕಾಯಿತೆಂದರು. ಮಹಿಳಾ ಚಳವಳಿಯಲ್ಲಿ ಇಂದು ಉತ್ಸಾಹ ಕಡಿಮೆಯಾಗಿದೆ ಎಂಬುದಕ್ಕಿಂತ ಮಹಿಳಾ ಚಳವಳಿ ಇಂದು ವಿಭಿನ್ನವಾದ ಆಯಾಮವನ್ನು ಪಡೆದುಕೊಳ್ಳುತ್ತಿದೆಯೆಂಬುದನ್ನು ಗುರುತಿಸಬೇಕು ಎಂದರು.


ಪತ್ರಿಕೆಯ ಬಿಡುಗಡೆ ಮಾಡಿದ ಖ್ಯಾತ ನ್ಯಾಯವಾದಿ ಹೇಮಲತಾ ಮಹಿಷಿಯವರು ಅಧ್ಯಕ್ಷ ಭಾಷಣದಲ್ಲಿ ಪತ್ರಿಕೆಯ ಪ್ರಕಟಣೆಯ ಹಿಂದಿರುವ ಶ್ರಮವನ್ನು ಗುರುತಿಸುತ್ತಾ, ಲೇಖನಗಳನ್ನು ಹೊಂದಿಸುವುದರಿಂದಾರಂಭಿಸಿ ಅಂಚೆ ಕಛೇರಿಗೆ ಸಕಾಲದಲ್ಲಿ ತಲುಪಿಸುವುದರವರೆಗಿನ ಶ್ರಮವನ್ನು ನೆನೆಯುತ್ತ, ಇದೆಲ್ಲ ಸುಲಭದ ಕೆಲಸವಲ್ಲ ಎಂದರು. "80ರ ದಶಕದಲ್ಲಿ ನಾವು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿ, ಜೋರಾಗಿ ಘೋಷಣೆಯನ್ನು ಕೂಗಿದ್ದೆವು. ಅಂದು ಮಹಿಳೆಯರಲ್ಲಿ ಇದ್ದ ಉತ್ಸಾಹ ಇಂದು ಸ್ವಲ್ಪ ಕಡಿಮೆಯಾಗಿದೆ ಅನ್ನಿಸಲು ಕಾರಣ ಎಲ್ಲರೂ ಬೇರೆ ಬೇರೆ ಕೆಲಸದಲ್ಲಿ ಮುಳುಗಿ ಹೋಗಿರುವುದಾಗಿರಬಹುದು. ಆದರೆ ಯುವ ಪೀಳಿಗೆ ಹೊಸ ಹೊಸ ಸಮಸ್ಯೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಿದೆ ಮತ್ತು ಹಿಂದೆಂದಿಗಿಂತ ಹೆಚ್ಚಿನ ರೀತಿಯಲ್ಲಿ ನ್ಯಾಯಕ್ಕಾಗಿ, ಪರಿಹಾರಕ್ಕಾಗಿ ಎಲ್ಲ ದಿಕ್ಕಿನಿಂದ ಹೋರಾಟ ಮಾಡುತ್ತಿದೆ. ಆದರೂ ನಾವೆಲ್ಲರೂ ಆಗಾಗ ಒಟ್ಟಿಗೆ ಸೇರಿ ಇಂತಹ ಚರ್ಚೆಯನ್ನು ನಡೆಸುವ ಅಗತ್ಯ ಖಂಡಿತಾ ಇದೆ" ಎಂದರು. ಡಾ॥ ಬಿ.ಎನ್. ಸುಮಿತ್ರಾಬಾಯಿಯವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ 'ಪೋಲ್‌ಪೋರ್' ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಸ್ತ್ರೀವಾದ- ಮಹಿಳಾ ಚಳವಳಿ- ಮರು ನಿರ್ವಚನ ಇತ್ಯಾದಿ...

'ನಮ್ಮ ಮಾನಸ' ಪತ್ರಿಕೆಯ 2009ರ ಮಾರ್ಚ್ ತಿಂಗಳ ಪತ್ರಿಕೆ ವಿಶೇಷಾಂಕವಾಗಿತ್ತು. ಅದರಲ್ಲಿ ಅನೇಕ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಸಾಧನೆ ಮಾಡಿದಂತಹ ಮಹಿಳೆಯರಿಂದ ಮಹಿಳಾ ಚಳವಳಿಯ ಹಿಂದಿನ ಹಾಗೂ ಇಂದಿನ ಸ್ವರೂಪ, ದಿಕ್ಕು, ದೃಷ್ಟಿಕೋನ, ಸಫಲತೆ, ವಿಫಲತೆಗಳನ್ನು ಕುರಿತಂತೆ ಒಂದು ತೌಲನಿಕ ವಿಶ್ಲೇಷಣೆಯನ್ನು ರೂಪಿಸಬೇಕು ಎಂಬ ಆಶಯ ನಮ್ಮದಾಗಿತ್ತು. ಅದಕ್ಕಾಗಿ ಮಹಿಳಾ ಚಳವಳಿಗಾರರಿಂದ / ನಿರ್ದಿಷ್ಟ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರಿಂದ ಈ ಕೆಳಕಂಡ ಪ್ರಶ್ನೆಗಳಿಗೆ ಪ್ರತಿಕ್ರಿಯೆಯನ್ನು ಆಹ್ವಾನಿಸಿದ್ದೆವು. ಲಭ್ಯವಾದ ಪ್ರತಿಕ್ರಿಯೆಗಳನ್ನು ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಮತ್ತಷ್ಟು ಪ್ರತಿಕ್ರಿಯೆಗಳನ್ನು ಇಲ್ಲಿ ಮುಂದುವರಿಸಿದ್ದೇವೆ.

ನಮ್ಮ ಪ್ರಶ್ನೆಗಳು ಹೀಗಿವೆ :

1. ಮಹಿಳಾ ಚಳವಳಿಯ ಜೊತೆಗೆ ನಿಮ್ಮ ಸಂಬಂಧವನ್ನು ನೀವು ಹೇಗೆ ಗುರುತಿಸಿಕೊಳ್ಳುತ್ತೀರಿ?
2. ಈ ಚಳವಳಿಯು ಪರಿಣಾಮಕಾರಿಯಾಗಿದೆ ಹಾಗೂ ನೀವೂ ಸೇರಿದಂತೆ ಮಹಿಳೆಯರು ಫಲಭಾಗಿಗಳಾಗಿದ್ದಾರೆ ಎಂದು ಅನ್ನಿಸುತ್ತದೆಯೆ?
3. 70–80ರ ದಶಕಗಳಲ್ಲಿ ಮಹಿಳಾ ಚಳವಳಿಗಾರರಲ್ಲಿ ಇದ್ದ ಉಮೇದು, ಹೋರಾಟದ ಉತ್ಸಾಹಗಳು ಇಂದು ಕಾಣದೆ ಇರುವುದಕ್ಕೆ ನಿಮ್ಮ ಕಾರಣಗಳೇನು?
4. 25 ವರ್ಷಗಳ ಹಿಂದೆ ಮಹಿಳೆಯರು ಎದುರಿಸುತ್ತಿದ್ದ ಸಮಸ್ಯೆಗಳು ಅವರನ್ನು ಸಂಘಟಿತರಾಗಿ ಹೋರಾಡಲು ಪ್ರೇರಿಸಿದ್ದವು. ಅವರ ಹೋರಾಟದ ಯತ್ನಗಳಿಂದಾಗಿಯೂ, ಸರ್ಕಾರವು ಅವರ ಕಾರ್ಯಕ್ರಮಗಳನ್ನು Co-opt ಮಾಡಿಕೊಂಡಿದ್ದರಿಂದಲೂ ಮಹಿಳೆಯರ ಕೆಲವಾದರೂ ನಿರೀಕ್ಷೆಗಳು ಈಡೇರಿರುವುದನ್ನು ಕಾಣುತ್ತೇವೆ. ಈಗ ಹೀಗೆ ಬದಲಾದ / ಬೆಳೆದ / ಭಿನ್ನ ಜಾಗಗಳಲ್ಲಿರುವ ಮಹಿಳೆಯರು ಎದುರಿಸಬೇಕಾಗಿರುವ ಸಮಸ್ಯೆಗಳೂ ಭಿನ್ನವಾಗಿವೆ. ಈ ಹೊಸ ಸಮಸ್ಯೆಗಳನ್ನು ಎದುರಿಸಲು ಅಗತ್ಯವಿರುವ ಹೋರಾಟ ತಂತ್ರ ಯಾವ ರೀತಿಯದಾಗಿರಬೇಕು?
5. ತೀವ್ರವಾಗಿ ಕೋಮುವಾದವು ಸಮಾಜವನ್ನು ಆವರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಮಹಿಳಾ ಚಳವಳಿಗೆ ಎದುರಾಗಿರುವ ಸವಾಲುಗಳೇನು?
6. ಜಾಗತೀಕರಣದಿಂದಾಗಿ ಮಹಿಳೆಯರು ಎದುರಿಸಬೇಕಾಗಿ ಬಂದಿರುವ ಆರ್ಥಿಕ / ಸಾಮಾಜಿಕ / ಧಾರ್ಮಿಕ / ರಾಜಕೀಯ ಸಮಸ್ಯೆಗಳು / ಸವಾಲುಗಳನ್ನು ಕುರಿತಂತೆ ನಿಮ್ಮ ವಿಶ್ಲೇಷಣೆ?
7. ಇಂದು ಒಂದೆಡೆ ಮಹಿಳೆಯರಲ್ಲಿ ಹೊಸ ಎಚ್ಚರ, ಸ್ವಪ್ರಜ್ಞೆಯ ಅರಿವು ಹೆಚ್ಚಾಗುತ್ತಿರುವಂತೆಯೆ ಮತ್ತೊಂದೆಡೆ ಮಹಿಳೆಯರ ಮೇಲಿನ ಕ್ರೌರ್ಯ, ಹಿಂಸೆಗಳ ಸ್ವರೂಪ ಮತ್ತು ಪ್ರಮಾಣಗಳು ಹೆಚ್ಚಾಗಿವೆಯೆನ್ನಿಸುತ್ತದೆಯೆ? ಇದರ ಕಾರಣಗಳೇನು?
8. ಸಾಮಾಜಿಕ ಹೋರಾಟ ಮತ್ತು ಮಹಿಳೆಯ ಆತ್ಮಶೋಧನೆಯ ಫಲವಾಗಿ ಹೊಮ್ಮುವ ಅಂತಃಸತ್ವ – ಈ ಎರಡನ್ನೂ ಒಂದಾಗಿಸಿಕೊಂಡ ತಾತ್ತ್ವಿಕ ದೃಷ್ಟಿಕೋನ ಮಹಿಳಾಚಳವಳಿಯ ಬಲವಾದ ಆಶಯಗಳಲ್ಲಿ ಒಂದು. ಇಂಥ ದೃಷ್ಟಿಕೋನ ಮಹಿಳಾಚಳವಳಿಯಲ್ಲಿ ಮೂಡಿಬಂದಿದೆ ಎನ್ನುತ್ತೀರಾ?
9. 'ಮಹಿಳಾಚಳವಳಿ' ಎಂಬ ಪರಿಕಲ್ಪನೆಯೇ ಮರುನಿರ್ವಚನಗೊಳ್ಳಬೇಕಾಗಿದೆಯೆಂದು ನಿಮಗೆ ಅನ್ನಿಸುತ್ತದೆಯೇ?
10. ಮಹಿಳಾತನ, ಪುರುಷತನಗಳ ಚೌಕಟ್ಟಿನ ಹೊರಗೆ ಬೆಳೆಯಬೇಕಾದ / ಬೆಳೆದಿರುವ ನಿಮ್ಮ ಸ್ವಕ್ಷೇತ್ರದ ಅನುಭವಗಳ ಬಗ್ಗೆ ಹೇಳಬಲ್ಲಿರಾ?



ಚಳವಳಿಯ ಮರುನಿರ್ವಚನದ ಅಗತ್ಯವಿದೆ

ಬಿ.ಎನ್. ಉಷಾ, ಹೆಂಗಸರ ಹಕ್ಕಿನ ಸಂಘ

1. ಭಾರತೀಯ ಮಹಿಳಾ ಚಳವಳಿ ಅದರ ಉತ್ಸಾಹ ಹಾಗೂ ಸ್ತ್ರೀವಾದಿ ಸಿದ್ಧಾಂತಗಳು, ಅಭಿವ್ಯಕ್ತಿ ಹಾಗೂ ಅದರ ಸವಾಲುಗಳನ್ನು ಮತ್ತು ಭಾರತೀಯ ಮಹಿಳೆಯರ ಜೀವನದ ಬದಲಾವಣೆಯನ್ನು ನೋಡುವ ದೃಷ್ಟಿಕೋನದೊಂದಿಗೆ ನಾವು ಬಲವಾಗಿ ನಮ್ಮನ್ನು ಗುರುತಿಸಿಕೊಳ್ಳುತ್ತೇವೆ. ಮಹಿಳೆಯರ ಕಾನೂನು ಹಕ್ಕುಗಳ ರಕ್ಷಣೆಗಾಗಿ ಇರುವ ನಮ್ಮ ಸಂಸ್ಥೆ, ಸ್ತ್ರೀವಾದಿ ದೃಷ್ಟಿಕೋನದಿಂದ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ನೋಡುವ ಅಗತ್ಯವನ್ನು ಕುರಿತು ಅಗಾಧವಾದ ಸ್ಫೂರ್ತಿ ಹಾಗೂ ಅರಿವನ್ನು ಭಾರತೀಯ ಮಹಿಳಾ ಚಳವಳಿಯಿಂದ ಪಡೆದಿದೆ.

2. ಮಹಿಳಾ ಚಳವಳಿ ಖಂಡಿತವಾಗಿಯು ಪರಿಣಾಮಕಾರಿಯಾಗಿದೆ. ಮಹಿಳೆಯರ ಬದುಕಿನಲ್ಲಿ ಬದಲಾವಣೆಯನ್ನು ತರುವಲ್ಲಿ ಚಳವಳಿ ಹಲವಾರು ರೀತಿಯಲ್ಲಿ ಮಹತ್ವವಾದ ಕೊಡುಗೆಯನ್ನು ನೀಡಿದೆ. ಆರೋಗ್ಯ, ಕಾನೂನು, ದುಡಿಮೆ, ಲೈಂಗಿಕತೆ ಯಾವುದೇ ವಿಷಯವಾಗಿರಲಿ, ಇದನ್ನು ಬೆಳಕಿಗೆ ತರುವಲ್ಲಿ ಅಥವಾ ಮಹಿಳೆಯರ ಬದುಕಿನ ವಾಸ್ತವಾಂಶಗಳನ್ನು ಕೇಂದ್ರೀಕರಿಸುತ್ತಲೇ ಪಾಲಿಸಿಯಲ್ಲಿಯೂ ಬದಲಾವಣೆಗಳನ್ನು ತರುವಲ್ಲಿ ಮಹಿಳಾ ಚಳವಳಿ ಧನಾತ್ಮಕ ಪರಿಣಾಮವನ್ನು ಬೀರಿದೆ. ಸಾವಿರಾರು ಮಹಿಳೆಯರಿಗೆ ಮಹಿಳಾಚಳವಳಿ ಸಶಕ್ತತೆ ಹಾಗೂ ಸಮೃದ್ಧ ಅನುಭವದ ಪ್ರಕ್ರಿಯೆಯಾಗಿದೆ.

3. ಮಹಿಳಾ ಚಳವಳಿ ಒಂದು ಹಂತದ ನಂತರ ಸ್ವಯಂ ಸೇವಾ ಸಂಸ್ಥೆಗಳಾಗಿ, ಮಹಿಳಾ ಅಧ್ಯಯನ ವಿಭಾಗಗಳಾಗಿ ರೂಪುಗೊಂಡಿತು. ಮಹಿಳಾಚಳವಳಿ ನೀಡಿದ ಸ್ತ್ರೀವಾದಿ ಚೌಕಟ್ಟನ್ನು ಮುಂದುವರಿಸಿಕೊಂಡು ಹೋಯಿತಾದರೂ, ಗುಂಪುಗಳ ರಚನೆಯಲ್ಲಿ ಬದಲಾವಣೆಯಾಗುವುದರ ಜೊತೆಯಲ್ಲಿ ಹೆಚ್ಚು ಹೆಚ್ಚು ಸಾಂಸ್ಥೀಕರಣಗೊಂಡವು. ಇದು ಸಹ ಒಂದು ಕಾರಣವಾಗಿರಬಹುದು.

4. ಇದಕ್ಕೆ ಒಂದು ಸಿದ್ಧ ಉತ್ತರವಿಲ್ಲದಿದ್ದರೂ ನಮ್ಮನ್ನೂ ಒಳಗೊಂಡಂತೆ ಪ್ರತಿಯೊಬ್ಬರೂ ಪ್ರಸ್ತುತ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಯನ್ನು ಎದುರಿಸಲು ತಮ್ಮದೇ ಆದ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ಬೇರೆ ಬೇರೆ ಹೋರಾಟಗಳು ಒಂದು ವಿಶಾಲ ವೇದಿಕೆಯಡಿಯಲ್ಲಿ ಒಂದುಗೂಡುವುದು ಅತ್ಯಂತ ಮುಖ್ಯ ಸಂಗತಿಯಾಗಿದೆ. ಹಲವಾರು ಸಂಘಟನೆಗಳು ವಿಭಿನ್ನ ಸಮಸ್ಯೆಗಳ ಸುತ್ತ ಹೋರಾಟ ನಡೆಸುತ್ತಾ ಪ್ರಮುಖ ಪ್ರಶ್ನೆಗಳನ್ನು ಎತ್ತುತ್ತಿದ್ದರೂ, ಅವು ಹಂಚಿಹೋಗಿವೆ. ಅಸಂಘಟಿತ ಕಾರ್ಮಿಕರು, ಆದಿವಾಸಿಗಳು ಹಾಗೂ ದಲಿತ ಜನಾಂಗದವರು ಬದಲಾಗುತ್ತಿರುವ ಆರ್ಥಿಕ ಹಾಗು ಸಾಮಾಜಿಕ ಬದಲಾವಣೆಯ ಹೊಡೆತವನ್ನು ಅನುಭವಿಸುತ್ತಿದ್ದಾರೆ. ಎಲ್ಲಾ ಹೋರಾಟಗಳೂ ಒಂದೇ ವೇದಿಕೆಯಡಿ ಬರದಿದ್ದರೆ ನವ ಉದಾರವಾದದ ಮೇಲೆ ಹಾಗು ಮೂಲಭೂತವಾದದ ವಿರುದ್ಧ ಧ್ವನಿ ಎತ್ತುವುದು ಕಷ್ಟವಾಗುತ್ತದೆ. ಒಂದೇ ವೇದಿಕೆಯಡಿಯಲ್ಲಿ ಒಂದುಗೂಡುವುದೆಂದರೆ ಭಿನ್ನಾಭಿಪ್ರಾಯವನ್ನು ಗುರುತಿಸುವುದು, ಗೌರವಿಸುವುದು ಹಾಗು ಹೋರಾಟಗಳಿಗೆ ಸಾಮಾನ್ಯ ನೆಲೆಯನ್ನು ಕಂಡುಕೊಳ್ಳುವುದು.

   ಇದುವರೆಗೂ ಮೌನವಾಗಿದ್ದ ದಲಿತರ, ಲೆಸ್‌ಬಿಯನ್ಸ್, ಸೆಕ್ಸ್ ವರ್ಕರ್ಸ್ ಮುಂತಾದ ಜನಾಂಗಗಳ ಪ್ರಶ್ನೆಯನ್ನು ಹಿಂದಿಗಿಂತ ಇಂದು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಮಹಿಳಾ ಚಳವಳಿ ಜಾತಿ, ಧರ್ಮ, ಹಿಂಸೆ ಹಾಗೂ ಅವುಗಳ ಏಜೆನ್ಸಿಗಳ ವಿಶ್ಲೇಷಣೆಯನ್ನು ಪುನರ್ ಅವಲೋಕಿಸುವುದು ಅಗತ್ಯವಾಗಿದೆ.

5. ಹೆಚ್ಚುತ್ತಿರುವ ಕೋಮುವಾದದ ಸಂದರ್ಭದಲ್ಲಿ ಮಹಿಳಾ ಸಂಘಟನೆಗಳ ಮುಂದಿರುವ ಸವಾಲುಗಳು:
   - **ಬಲಪಂಥೀಯ ಗುಂಪುಗಳಿಂದ ಬಲಗೊಳ್ಳುತ್ತಿರುವ ಹಿಂದುತ್ವದ ಅಪಾಯಕಾರಿ ಗುಣಗಳನ್ನು ಸ್ಪಷ್ಟವಾಗಿ ಬಯಲಿಗೆಳೆಯುವುದು. ಇದುವರೆಗೂ ಮಹಿಳಾ ಚಳವಳಿ ವಿರೋಧಿಸಿಕೊಂಡು ಬಂದ ಪುರಾತನ ಪಿತೃಪ್ರಧಾನ ವ್ಯವಸ್ಥೆಯನ್ನು ಇಂದು ಹಿಂದೂ ಪರ ಸಂಘಟನೆಗಳು ತಮ್ಮ ಸಿದ್ಧಾಂತಗಳ ಮೂಲಕ ಅದರ ಪರವಾಗಿ ಮಾತನಾಡುತ್ತಿವೆ – ಆ ಬಗ್ಗೆ ಕ್ರಮ ಕೈಗೊಳ್ಳುವುದು.**
   - **ಆಶ್ಚರ್ಯಕರ ರೀತಿಯಲ್ಲಿ ಅವರ ಸಿದ್ಧಾಂತಗಳು ಜನಪ್ರಿಯಗೊಳ್ಳುತ್ತಿವೆ. ಈ ಸಂಘಟನೆಗಳು ಅವರ ಗುರಿ ತಲುಪುವ ಉದ್ದೇಶದಿಂದ ದಲಿತ ಹಾಗು ಆದಿವಾಸಿ ಜನಾಂಗಗಳ ಬೆಂಬಲ ಪಡೆಯುತ್ತಿರುವ ರೀತಿಯ ಬಗ್ಗೆ ಎಚ್ಚರವಾಗಿರುವುದು.**
   - **ನಮ್ಮೆದುರಿಗಿರುವ ಮುಖ್ಯ ಸವಾಲೆಂದರೆ, ನಮ್ಮ ನೆಲೆಗಳಿಂದ ಧರ್ಮ, ದಾರ್ಶನಿಕತೆ ಹಾಗೂ ನಂಬಿಕೆ ಇಂತಹ ವಿಚಾರಗಳಲ್ಲಿ ಗಂಭೀರವಾಗಿ ತೊಡಗಿಕೊಳ್ಳುವುದರ ಮೂಲಕ ಅವರ ಅಪಾಯಕಾರಿ ರಾಜಕೀಯವನ್ನು ವಿರೋಧಿಸುವುದು.**

6. ಮಾರುಕಟ್ಟೆ ಕೇಂದ್ರಿತ ನೀತಿ ಹಾಗೂ ಅಭಿವೃದ್ಧಿಯಿಂದಾಗಿ ದೊಡ್ಡ ಪ್ರಮಾಣದ ಸ್ಥಳಾಂತರದ ಸಮಸ್ಯೆ, ಜೀವನ ಆಧಾರದ ಅವಕಾಶಗಳ ನಷ್ಟ, ಪರಿಸರದ ನಾಶ, ಜೀವನ ನಿರ್ವಹಣೆಯ ಅವಕಾಶಗಳ ನಾಶ ಉಂಟಾಗುತ್ತದೆ. ಇದರ ಪರಿಣಾಮಗಳನ್ನು ಗುಳೇ ಹೋಗುವುದು, ಅಸಂಘಟಿತ ವಲಯದ ದುಡಿಮೆ ಹಾಗೂ ವಿವಿಧ ಕ್ಷೇತ್ರಗಳು ಖಾಸಗೀಕರಣಗೊಳ್ಳುತ್ತಿರುವ ಪ್ರಕ್ರಿಯೆಯಲ್ಲಿ ಕಾಣಬಹುದು.

   ಮಹಿಳೆಯರಿಗೆ ಕೆಲಸ ಸಿಗುವುದು ಕಷ್ಟವಾಗುತ್ತಿರುವುದರಿಂದ ಅವರು ಕಾರ್ಮಿಕ ಕಾನೂನಿನ ರಕ್ಷಣೆಯಿಲ್ಲದ, ಕಡಿಮೆ ವೇತನದ ಕೆಲಸಗಳಿಗೆ ಹೋಗುವುದು ಅನಿವಾರ್ಯವಾಗಿದೆ. ಅವರು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ದುರ್ಬಲಗೊಂಡ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದಾಗಿ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಯಿಂದ ಅವರು ವಂಚಿತರಾಗುತ್ತಿದ್ದಾರೆ. ಮಾರುಕಟ್ಟೆ ಕೇಂದ್ರಿತ ಅಭಿವೃದ್ಧಿಯು ಮಧ್ಯಮ ಹಾಗೂ ಮೇಲ್ವರ್ಗದ

ಮಹಿಳೆಯರಿಗೆ ಉದ್ಯೋಗ ಅವಕಾಶವನ್ನು ಸೃಷ್ಟಿಸಿದೆ. ಆದರೆ ಬಹುಪಾಲು ಅವರು ಆರೋಗ್ಯಪೂರ್ಣ, ಹಾಗೂ ಸುರಕ್ಷಿತ ಜೀವನಕ್ಕಾಗಿ ಹೆಣಗಾಡುತ್ತಲೇ ಇರಬೇಕಾಗಿದೆ.

7. ಹೆಚ್ಚು ಹೆಚ್ಚು ಮಹಿಳೆಯರು ಸಾರ್ವಜನಿಕ ಕ್ಷೇತ್ರವನ್ನು ವಿಶೇಷವಾಗಿ ಪುರುಷಪ್ರಧಾನ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದರಿಂದ ಇದೇ ಅವರಿಗೆ ತಿರುಗೇಟು ನೀಡುತ್ತಿದೆ. ಇಂದು ಮಹಿಳೆಯರು ಗೃಹ ನಿರ್ವಹಣಾ ಪಾತ್ರವನ್ನು ವಹಿಸುವ ಬದಲಾಗಿ ಅವರು ಕುಟುಂಬದ ಆದಾಯದ ಮೂಲವಾಗಿದ್ದಾರೆ. ಪುರುಷರು ಇಂದು ವಿಭಿನ್ನವಾದ ಪಾತ್ರವನ್ನು ನಿರ್ವಹಿಸಬೇಕಾದ ಒತ್ತಡವಿರುವುದರಿಂದ ಪುರುಷತ್ವವೂ ಸಹ ಇಂದು ಬಿಕ್ಕಟ್ಟಿನಲ್ಲಿದೆ. ಆರ್ಥಿಕ ಬದಲಾವಣೆಗಳು ಸಮಾಜದಲ್ಲಿನ ಮೌಲ್ಯಗಳಲ್ಲೂ ಸಹ ಬದಲಾವಣೆಯನ್ನು ಉಂಟುಮಾಡಿ ಪುರುಷರಲ್ಲಿ ಆಕ್ರಮಣಕಾರಿ ಮನೋಭಾವನೆಯನ್ನು, ಭೋಗ ಸಂಸ್ಕೃತಿಯನ್ನು ಹೆಚ್ಚಿಸುತ್ತಿವೆ. ಈ ಸಂಕೀರ್ಣ ಬದಲಾವಣೆಯಿಂದಾಗಿ ಅಂಚಿನ ಸಮುದಾಯಗಳು ಹಾಗೂ ಮಹಿಳೆಯರು ಹಿಂಸೆಯನ್ನು ಎದುರಿಸುತ್ತಿದ್ದಾರೆ.

8. ಖಂಡಿತವಾಗಿಯು ಹೌದು, ಮಹಿಳಾಚಳವಳಿಯಿಂದ ಮೂಡಿಬಂದ ಸಾಹಿತ್ಯ ಮಹಿಳಾಚಳವಳಿಯ ಮೇಲೆ ಬೀರುವ ಪ್ರಭಾವವೇ ಇದಕ್ಕೆ ಸಾಕ್ಷಿಯಾಗಿದೆ.

9. ಹೌದು, ಚಳವಳಿಯನ್ನು ಮರುನಿರ್ವಚನೆ ಮಾಡುವ ಅಗತ್ಯವಿದೆ.

10. LGBT [ಲೆಸ್‌ಬಿಯನ್, ಗೇಸ್, ಬೈಸೆಕ್ಸುಯಲ್, ಟ್ರಾನ್ಸ್‌ಜಂಡರ್] ಸಂಘಟನೆಯ ಮುಖ್ಯ ಹೊಳವುಗಳು ನಮ್ಮ ದ್ವಿಲಿಂಗ ಪರಿಕಲ್ಪನೆ ಬಗ್ಗೆ ಮರು ಆಲೋಚಿಸುವಂತೆ ಮಾಡಿವೆ. ನಮ್ಮ ಸಂಘಟನೆಯ ಕೆಲಸಗಳಲ್ಲಿ ಅವರ ಸಮಸ್ಯೆಗಳನ್ನು ಒಳಗೊಳ್ಳುವಂತೆ ಮಾಡಿವೆ. ಉದಾ: ನಮ್ಮ ಫೆಡರೇಶನ್ ಕೆಲಸದಲ್ಲಿ ಚರ್ಚಿಸುವಾಗ ದ್ವಿಲಿಂಗ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹಾಗೂ ಕಾನೂನುಗಳ ಬಗ್ಗೆ ಚರ್ಚಿಸುವಾಗ LGBT ಗುಂಪುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುತ್ತದೆ. ಹಾಗಾಗಿ ಲೈಂಗಿಕತೆಯ ಚರ್ಚೆ, ಲೈಂಗಿಕತೆ, ದೇಶದ ರಾಜಕೀಯ ಮುಂತಾದ ವಿಷಯಗಳನ್ನು ಅರ್ಥೈಸುವ ವಿಧಾನದ ಮೇಲೆ ಮಹತ್ವದ ಪರಿಣಾಮವನ್ನು ಬೀರುತ್ತದೆ.

❑



ಚಳವಳಿಯ ತಳಹಾಸು ವಿಸ್ತರಿಸಿಕೊಳ್ಳಬೇಕು

ಇ. ರತಿರಾವ್
ನಿವೃತ್ತ ವಿಜ್ಞಾನಿ, CFTRI, ಮೈಸೂರು.

1. ಮಹಿಳಾ ಚಳವಳಿಯು ಮಹಿಳೆಯರ ಸಮಾನತೆ, ಆತ್ಮಗೌರವ ಮತ್ತು ವಿಮೋಚನೆಯ ಹೋರಾಟ. ಬೂರ್ಜ್ವಾ ಜನತಾಂತ್ರಿಕ ಹೋರಾಟದ ಒಂದು ಭಾಗ ಅದು. ಬೂರ್ಜ್ವಾ ರಾಜಕೀಯ ಪಕ್ಷಗಳ ರೀತಿಯಲ್ಲಿ ಸಂಪ್ರದಾಯಸ್ಥ ಎಡಪಕ್ಷ ಕೂಡ ಮಹಿಳಾ ಪ್ರಶ್ನೆಯನ್ನು ಆದ್ಯತೆಯ ವಿಷಯವೆಂದು ಪರಿಗಣಿಸದೆ ಇದ್ದ ಕಾಲದಲ್ಲಿ ಸ್ವಾಯತ್ತ ಮಹಿಳಾಚಳವಳಿ ಮಹಿಳೆಯರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹೊಮ್ಮಿ ಬಂದಿತು. ಸ್ವಾಯತ್ತ ಮಹಿಳಾ ಚಳವಳಿಯ ಭಾಗವಾಗಿ ಮಹಿಳೆಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಲು ಒಂದು ಸ್ಪೇಸ್ ಮಹಿಳೆಯರಿಗೆ ದೊರಕಿತ್ತು. ನಿರ್ದಿಷ್ಟ ಸಮಸ್ಯೆಗಳನ್ನು ಆಧರಿಸಿ ನಡೆಸುತ್ತಿದ್ದ ಸ್ತ್ರೀವಾದಿ ಮಧ್ಯಸ್ಥಿಕೆ ಯತ್ನಗಳು (Femisist Intervention) ಯಶಸ್ವಿಯಾದವು. ಅನೇಕ ಸಲ ಶೋಷಣೆಗೆ ಬಲಿಯಾದಾಕೆ, ಅವಳ ಬಂಧುಗಳು, ಹಿತೈಷಿಗಳು ಮತ್ತು ಸಾರ್ವಜನಿಕರೂ ಈ ಹೋರಾಟಗಳಿಗೆ ಬೆಂಬಲ ನೀಡುತ್ತಿದ್ದರು. ಹೀಗೆ ಸಮಸ್ಯೆಗಳ ನಿವಾರಣೆಗಾಗಿ ಮಧ್ಯಸ್ಥಿಕೆ ನಡೆಸುವ ಮೂಲಕವೇ ಮಹಿಳಾ ಚಳವಳಿಗೆ ಬಲವಾದ ನೈತಿಕ ಮತ್ತು ಸೈದ್ಧಾಂತಿಕ ಒಲವು ದೊರೆಯಿತು. ಸಂಸ್ಕೃತಿಯು ಶ್ರೇಣೀಕೃತವಲ್ಲ; ಅದು ಎಲ್ಲರನ್ನೂ ಒಳಗೊಳ್ಳುವಂಥಾದ್ದು, ಆದ್ದರಿಂದ ಸಾಮೂಹಿಕ ಕಾರ್ಯಾಚರಣೆಯ ತಳಹದಿ ಮೇಲೆ ನಡೆಯುತ್ತಿದ್ದ ಹೋರಾಟ ವಿಧಾನಗಳು ಕಾರ್ಯಕರ್ತರ ಮನಸ್ಸುಗಳ ಮೇಲೆ ತಮ್ಮದೇ ಆದ ಪರಿಣಾಮ ಬೀರಿದವು.

2. ಈ ಚಳವಳಿಯು ಒಟ್ಟಾರೆಯಾಗಿ ಹೇಳುವುದಾದರೆ ಯಶಸ್ವಿಯಾಗಿದೆ ಎಂದು ಹೇಳಬಹುದು. ಒಂದು ಪ್ರಗತಿಪರ ವೇದಿಕೆಯ ಸಕ್ರಿಯಭಾಗವಾಗಿ ಅದು ನಮ್ಮ ಬದುಕುಗಳನ್ನು ರೂಪಿಸಿದೆ, ನಮ್ಮ ಕುಟುಂಬಗಳ ಮೇಲೆ ಬಲವಾದ ಪರಿಣಾಮ ಬೀರಿದೆ. ಈ ಕಿಡಿ ಹೊತ್ತಿಕೊಂಡದ್ದು ಕೇವಲ ವೈಯಕ್ತಿಕ ನೆಲೆಯಲ್ಲಷ್ಟೇ ಅಲ್ಲ, ಹೊಸ ವಿಚಾರಗಳ ಹೊಸ ರೀತಿಯ ಸಮಸ್ಯೆಗಳ ಮಧ್ಯಸ್ಥಿಕೆ ವಹಿಸುವ ಮೂಲಕ, ಪ್ರಗತಿಪರ ವರ್ತುಲಗಳಲ್ಲಿ ಸಕ್ರಿಯವಾಗಿ ತೊಡಗುವ ಮೂಲಕ ಈ ಕಿಡಿಯನ್ನು ಜೀವಂತವಾಗಿ ಉಳಿಸಿಡುತ್ತಾ ಬರಲಾಗಿದೆ. ಸಾಮೂಹಿಕ ಚಳವಳಿಗಳು ದಲಿತರದಿರಲಿ, ಬುಡಕಟ್ಟಿನದಿರಲಿ, ಕಾರ್ಮಿಕರದಿರಲಿ – ಅವುಗಳ ಜೊತೆ ಅವುಗಳ ಭಾಗವಾಗಿ ತಾನೂ ಉಳಿದಿರುವುದು ಸಾಕಷ್ಟು ದೊಡ್ಡ ಸವಾಲು. ನಮ್ಮ ಸಂಪರ್ಕಕ್ಕೆ ಬಂದ ಮಹಿಳೆಯರು ಸ್ಪಷ್ಟವಾಗಿ ನಮ್ಮನ್ನು ಒಂದು ಶಕ್ತಿ ಎಂದೂ, ಮಹಿಳಾಸಮಸ್ಯೆಗೆ ನಮ್ಮ ಬದ್ಧತೆ ಪ್ರಾಮಾಣಿಕವಾದದ್ದೆಂದೂ ಗುರುತಿಸಿದ್ದಾರೆ.

3. 1970–80ರ ದಶಕ ಇಡೀ ಜಗತ್ತಿನಲ್ಲೂ ದೇಶದಲ್ಲೂ ಕರ್ನಾಟಕದಲ್ಲೂ ಅನೇಕ ಹೊಸ ಸಾಮಾಜಿಕ ಚಳವಳಿಗಳಿಂದ

ಸಾಮಾಜಿಕ ರಾಜಕೀಯ ಮಂಥನದ ಯುಗವೆಂದು ಚರಿತ್ರೆಯಲ್ಲಿ ಈಗಾಗಲೇ ಸೇರಿದೆ. ಆ ದಶಕದಲ್ಲಿ ಎಲ್ಲಾ ದಿಕ್ಕಿನ ಸಾಮಾಜಿಕ ಚಳವಳಿಗಳೂ ತಮ್ಮ ಶಿಖರವನ್ನು ತಲುಪಿದ್ದವು. ಸಮಾಜದ ಪ್ರತಿಯೊಂದು ಸ್ತರದಲ್ಲೂ ಸರ್ಕಾರಕ್ಕೆ ಅಪಾಯ ಎದುರಾಗಿತ್ತು. ಬಸವಲಿಂಗಪ್ಪನವರ ಬೂಸಾಹಗರಣದಿಂದ ಮೇಲೆದ್ದು ಬಂದ ಹೊಸ (ಬಂಡಾಯ) ಸಾಹಿತ್ಯ ಚಳವಳಿ, ದಲಿತ ಸಂಘರ್ಷ, ಮಹಿಳಾ ಚಳವಳಿ, ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯ ಘೋಷಣೆಯ ದುಷ್ಪರಿಣಾಮಗಳ ವಿರುದ್ಧ ಹುಟ್ಟಿದ ಪ್ರತಿಭಟನೆ, ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಪಕ್ಷಗಳ ಸರ್ಕಾರ ರಚನೆಯಾದದ್ದು, ಮಾನವಹಕ್ಕು ಚಳವಳಿ (PUCL ಮತ್ತು PUDR) ಮುಂತಾದವು ಕ್ರಿಯಾಶೀಲವಾಗಿದ್ದ ಕಾಲ ಅದು. ಸಾಮಾಜಿಕ ಚಳವಳಿಯು ಯಾವತ್ತೂ ಅಲೆಯಲೆಯಾಗಿಯೇ ಹೊಮ್ಮುವಂಥದ್ದು ಆ ಅಲೆ ಈ ಅವಧಿಯಲ್ಲಿ ಉತ್ತುಂಗಕ್ಕೇರಿತ್ತು.

ಈ ಎಲ್ಲಾ ಚಳವಳಿಗಳೂ ಅವನತಿ ಹೊಂದಿರುವುದಕ್ಕೆ ಒಂದಲ್ಲ, ಹಲವಾರು ಕಾರಣಗಳಿವೆ. 1970–80ರಲ್ಲಿ ಸಾಮಾಜಿಕ–ರಾಜಕೀಯ ಹಾಗೂ ಆರ್ಥಿಕ ನೆಲೆಗಳಲ್ಲಿ ಸಮುದಾಯ ಯಾವೆಲ್ಲ ಪರಿವರ್ತನೆಗೆ ಒಳಗಾಗಿತ್ತೊ ಅದು ಇಂದು ಬಲವಾದ ಸಂರಚನಾತ್ಮಕ ಬದಲಾವಣೆಗೆ ಒಳಗಾಗಿದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ಗಳ ಮೂಲಕ ಸಾಧಿಸಲಾಗಿದ್ದ ಆರ್ಥಿಕ ಸ್ಥಿರತೆಯು ಅಲ್ಪಾಯುವಾಗಿದ್ದು, ಬಡವರ್ಗಗಳನ್ನು ಅದು ತಲುಪಲೇ ಇಲ್ಲ. ಆ ಸ್ಥಿರತೆ ಇದೀಗ ಒರೆಸಿ ಹಾಕಲ್ಪಟ್ಟಿದೆ. ಇಂದು ಸಮಾಜದ ಎಲ್ಲ ವರ್ಗವೂ ಆಳವಾದ ಕ್ರೈಸಿಸ್‌ಗೆ ಒಳಗಾಗಿದೆ. ಪ್ರತಿಯೊಂದು ವಲಯವೂ ತನ್ನದೇ ರೀತಿ ಪ್ರತಿಭಟನೆ ತೋರುತ್ತಿದೆ. ಮಹಿಳಾ ಚಳವಳಿ ಕೂಡ ಇದೇ ಸಾಮಾಜಿಕ ನೇಯ್ಗೆಯಲ್ಲಿ ಒಂದಾಗಿದೆ. ಅದು ಇಂತಹ ಬಿಡಿ ಬಿಡಿ ಹೋರಾಟಗಳಲ್ಲಿ ಸಕ್ರಿಯವಾಗಿದೆ. ಸಮಸ್ಯೆಯ ಆಧಾರದ ಮೇಲೆ ಈ ಹೋರಾಟಗಳು ಒಗ್ಗಟ್ಟಾಗುವುದು ಖಂಡಿತ.

4. 25 ವರ್ಷಗಳ ಹಿಂದೆ ನಮಗೆ ಸಮಸ್ಯೆಗಳ ನಡುವೆ ಪ್ರವೇಶಿಸಲು ಬೆಂಬಲ ನೀಡುವಂಥ ಪ್ರಗತಿಪರ ಕಾನೂನುಗಳು ಯಾವುದೂ ಇರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಲಿಂಗತ್ವ ಸಂವೇದಿ ಎನ್ನಲಾಗುವ ಅನೇಕ ಕಾನೂನುಗಳು ಈಗ ನಮ್ಮ ನೆರವಿಗೆ ಇವೆ. ಆದರೆ ಲಿಂಗತ್ವ ಸಂವೇದನೆ ಎಂಬುದು ಸಾಮಾಜಿಕ ರಚನೆಯ ಒಳಸ್ತರಗಳಿಗೆ ಇಳಿದೇ ಇಲ್ಲ. ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಾದರೆ ಪೊಲೀಸರು, ಕೋರ್ಟುಗಳು, ವಕೀಲರು, ನ್ಯಾಯಾಧೀಶರು, ಭದ್ರತಾ ಅಧಿಕಾರಿಗಳು, ರಕ್ಷಣಾಗೃಹಗಳು ಮುಂತಾದ ಎಲ್ಲ ಹಂತಗಳಲ್ಲೂ ಲಿಂಗತ್ವಕ್ಕೆ ಸಂಬಂಧಿಸಿದಂತೆ ಕ್ರಾಂತಿಕಾರಕ ಬದಲಾವಣೆಗಳು ಜನರ ಮನೋಧರ್ಮದಲ್ಲಿ ಆಗಬೇಕಾದ್ದು ತುಂಬ ಅವಶ್ಯಕ. ಮಹಿಳಾ ಚಳವಳಿಯ ಕ್ರಾಂತಿಕಾರಿ ಘೋಷಣೆಗಳನ್ನು ಸರ್ಕಾರಗಳು ತೀರಾ ಮೇಲ್ಪದರದಲ್ಲಿ ಕೋ-ಆಪ್ಟ್ ಮಾಡಿಕೊಂಡಿವೆ. ಆದರೆ ಅವುಗಳನ್ನು ಕಾರ್ಯಗತಗೊಳಿಸಲಿಕ್ಕೆ ಆಳುವ ವರ್ಗವು ಕಿಂಚಿತ್ತು ರಾಜಕೀಯ ಇಚ್ಛಾಶಕ್ತಿಯನ್ನೂ ತೋರಿಸುತ್ತಿಲ್ಲ. ಮಹಿಳೆಯರಿಗೆ ಅವರ ಜನತಾಂತ್ರಿಕ ಬೇಡಿಕೆಗಳಿಗೆ ನ್ಯಾಯವೊದಗಿಸಲು ಬೇಕಾದ ಕಳಕಳಿಯಾಗಲಿ, ತುರ್ತಾಗಲಿ ಪೂರ್ತಿಯಾಗಿ ಅಭಾವ ಹೊಂದಿದೆ.

5. ಕೋಮುವಾದಿ ಸರ್ವಾಧಿಕಾರವು LPGಯ ಜೊತೆ ಕೈಗೂಡಿಸಿದ್ದಾಗಿದೆ. ಕೋಮುವಾದವು ಕರ್ನಾಟಕದ ಕೆಲವು ಜಿಲ್ಲೆಗಳನ್ನು ಕೈವಶ ಮಾಡಿಕೊಂಡಿದೆ. ಇತ್ತೀಚೆಗೆ ಮಂಗಳೂರು, ಬೆಂಗಳೂರು ಮತ್ತಿತರ ಸ್ಥಳಗಳಲ್ಲೂ ನಡೆದಂಥ ದೌರ್ಜನ್ಯ ಮತ್ತು ಪೊಲೀಸ್ ಕಾರ್ಯಾಚರಣೆಗಳು ಮಹಿಳೆಯರ ಸ್ವಾತಂತ್ರ್ಯ, ವೈಯಕ್ತಿಕ ಆಯ್ಕೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಮೊಟಕು ಮಾಡುವ ಗುರಿಯುಳ್ಳವುಗಳಾಗಿವೆ. ಮಹಿಳಾ ಚಳವಳಿಯು ದೀರ್ಘವಾದ ಹೋರಾಟದಿಂದ ಗಳಿಸಿಕೊಂಡಿದ್ದ ಸ್ವಾತಂತ್ರ್ಯಗಳು ಇವುಗಳೇ ಆಗಿದ್ದವು. ಈಗ ಕೋಮುವಾದಿ ನಿರಂಕುಶತಾವಾದದ ಎದುರಲ್ಲಿ ಇವೆಲ್ಲಕ್ಕೂ ಅಪಾಯದ ಭೀತಿ ಉಂಟಾಗಿದೆ. ಮಹಿಳಾಚಳವಳಿಯ ಬಗೆಗಿನ ಅಸಹನೆಯು ಮಹಿಳೆಯರನ್ನು ನಿರ್ಬಂಧಿಸುವುದಕ್ಕಾಗಿ ಹೂಡಿದ ಹೂಟವಾಗಿದೆ. ಸಂಕುಚಿತ ಮನೋಧರ್ಮದ ನಿರಂಕುಶವಾದವು ಮಹಿಳೆಯರ ಜನತಾಂತ್ರಿಕ ಹಾಗೂ ಮಾನವ ಹಕ್ಕುಗಳ ಮೇಲೆ ಆಕ್ರಮಣ ನಡೆಸತೊಡಗಿದೆ. ಈ ಶಕ್ತಿಯು ಯಾವ ಕೋಮಿನದೇ ಆಗಿರಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ – ಯಾವುದೇ ಆಗಿದ್ದರೂ ಅದು ಮಹಿಳಾ ಚಳವಳಿಯ ಮೇಲಿನ ನೇರವಾದ ಆಕ್ರಮಣವೇ ಆಗಿದೆ. ಮಹಿಳಾ ಚಳವಳಿಯು ತಾನು ಕಷ್ಟಪಟ್ಟು ಗಳಿಸಿಕೊಂಡಿದ್ದ ಸವಲತ್ತುಗಳನ್ನು ರಕ್ಷಿಸಿಕೊಳ್ಳಲು ಈ ರೀತಿಯ ಪ್ರತಿಯೊಂದು ಫ್ಯಾಸಿಸ್ಟ್ ಆಕ್ರಮಣದ ವಿರುದ್ಧ ಸಂಘಟಿತ ಪ್ರತಿಭಟನೆ ನಡೆಸಬೇಕಾಗಿದೆ. ಪ್ರತಿ ಹಂತದಲ್ಲೂ ಸಾರ್ವಜನಿಕ ಅಭಿಪ್ರಾಯ ರೂಪಿಸಬೇಕಾದ್ದು ಅವಶ್ಯಕವಿದೆ. ನಮ್ಮ ಸಾರ್ವಜನಿಕ ಸ್ಥಳಗಳು ಸುರಕ್ಷಿತವೂ ವ್ಯಾಪಕವೂ ಆಗಬೇಕಾಗಿವೆ. ನಾವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ನಿಟ್ಟಿನಲ್ಲಿ ಜನಜಾಗೃತಿಗಾಗಿ ಪ್ರಚಾರ, ಚರ್ಚೆಗಳ ಜನತಾಂತ್ರಿಕ ಕಾರ್ಯಗಳನ್ನು ನಡೆಸುವುದು ಅವಶ್ಯಕವಿದೆ.

6. ಬಂಡವಾಳಶಾಹಿಯು ಅದರ ಹುಟ್ಟಿನಲ್ಲೆ ಜಾಗತಿಕ ವಿದ್ಯಮಾನವೆಂದು ಅರ್ಥೈಸಲ್ಪಡುತ್ತದೆ. ಅದು ವ್ಯಾಪಾರದ ಉದಾರೀಕರಣ ಮತ್ತು ಖಾಸಗೀಕರಣ, ಆಳವಾದ ಕಾರ್ಪೊರೇಟ್ ಲಾಭಗಾರಿಕೆಯಲ್ಲಿ ಬೇರೂರಿದ ಅವ್ಯವಸ್ಥೆ, ವ್ಯಕ್ತಿವಾದದ ಅತಿರೇಕ ಹಾಗೂ ಕಾರ್ಪೊರೇಟ್ ಸಂಸ್ಕೃತಿಯ ಮೂಲಕ ನಿಧಾನವಾಗಿ ನಮ್ಮ ಸಾಮಾಜಿಕ ನೇಯ್ಗೆಯನ್ನು ನುಂಗುತ್ತಿದೆ. IT - BTಗಳು ಮತ್ತು ಅಂಥದೇ ಕೆಲವು ವಲಯಗಳನ್ನು ಹೊರತುಪಡಿಸಿದರೆ ಸಮಾಜದ ಬೇರೆಲ್ಲಾ ವಲಯಗಳಲ್ಲಿ – ಅದು ಸಾರ್ವಜನಿಕವಿರಲಿ, ಖಾಸಗಿಯದಿರಲಿ – ಸಾರ್ವಜನಿಕ ಸ್ಪೇಸ್ ಹಾಗೂ ಉದ್ಯೋಗಾವಕಾಶಗಳು ಕುಗ್ಗುತ್ತಿವೆ. ದೊಡ್ಡ ಪ್ರಮಾಣದ ಖಾಸಗೀಕರಣದ SEZ ಹೆಸರಿನಲ್ಲಿ ಕಾರ್ಪೊರೇಟ್ ಶಕ್ತಿಗಳು ಯಾವುದೇ ಅಡ್ಡಿಯಿಲ್ಲದೆ ಭೂಮಿಯನ್ನು ಕಬಳಿಸುತ್ತಿರುವುದು, ಆಂತರಿಕ ಸಂರಚನೆಗಳ ಪ್ರಗತಿ, ಹೆದ್ದಾರಿಗಳ ನಿರ್ಮಾಣ, ವಿಮಾನ ನಿಲ್ದಾಣಗಳು, ಬೃಹದಾಕಾರದ ಮಾಲ್‌ಗಳು, ಭೂ–ಮಾಫಿಯಾಗಳಿಗೆ ಇವು ಸುಗ್ಗಿಯ ದಿನಗಳಾಗಿವೆ. ಜನರು ಸ್ಥಾನಪಲ್ಲಟಕ್ಕೆ ಒಳಗಾಗಿದ್ದು ತಮ್ಮನ್ನು ತಾವು ಕಾಪಾಡಿಕೊಳ್ಳಬೇಕಾಗಿದೆ. ಖಾಸಗೀಕರಣದ ಉಮೇದು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯಗಳ ಮೇಲೆ ದಾಳಿಯಿಟ್ಟಿದೆ, ಇದು ಸಾರ್ವಜನಿಕರ ಖಾಸಗಿ ಪಾಲುದಾರಿಕೆ (PPP) ಹೆಸರಿನಲ್ಲಿ ಮಧ್ಯಾಹ್ನದ ಬಿಸಿಯೂಟದ ಸರಬರಾಜನ್ನು ಖಾಸಗಿಯವರಿಗೆ ವಹಿಸಿದ್ದರಿಂದ ಅಂಗನವಾಡಿ ದುಡಿಮೆಗಾರರ ಹೊಟ್ಟೆ ಮೇಲೆ ಹೊಡೆದಂತಾಗಿದೆ. ಅವರು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಂಡಿದ್ದಾರೆ. ಖಾಸಗೀಕರಣವನ್ನು ಸಡಿಲಗೊಳಿಸಿದ್ದರಿಂದ ಒಂದು ಕಡೆ ಸಿಂಗೂರ್, ನಂದಿಗ್ರಾಮದಲ್ಲಿ ಆದಂತೆ ಕಾರ್ಪೊರೇಟ್ ಭೂಕಬಳಿಕೆ ವಿರುದ್ಧವಾದ ಪ್ರತಿಭಟನೆಗಳು ನಡೆಯುತ್ತಿದ್ದರೆ, ಮತ್ತೊಂದು ಕಡೆ (ಸಾರ್ವಜನಿಕ ವಲಯದ ಎಲ್ಲ ವಿಭಾಗಗಳ

ಕಡೆಗೆ) ಅದು ಆರೋಗ್ಯವಿರಲಿ, ಸಾರಿಗೆ ವ್ಯವಸ್ಥೆಯಿರಲಿ, ಶಿಕ್ಷಣ ವಿರಲಿ, ಸ್ಯಾನಿಟರಿ ವ್ಯವಸ್ಥೆಯಿರಲಿ, ಕಸ ರವಾನಿಸುವುದಿರಲಿ, ವಿದ್ಯುಚ್ಛಕ್ತಿ, ಜೀವವಿಮೆ, DDF ಇತ್ಯಾದಿ ಎಲ್ಲ ಕ್ಷೇತ್ರಗಳ ಕಡೆಗೂ ಖಾಸಗೀಕರಣದ ಕಣ್ಣು ಬಿದ್ದಿದೆ. ಬಿಜಾಪುರದಲ್ಲಿ ರೇಷನ್‌ಕಾರ್ಡ್‌ಗಾಗಿ ಹಕ್ಕೊತ್ತಾಯಿಸಿದ ಮಹಿಳೆಯರು ಬೆತ್ತದೇಟು ತಿನ್ನಬೇಕಾಯಿತು ಎಂಬುದನ್ನು ಗಮನಿಸಬೇಕು.

ಧಾರ್ಮಿಕ ಮೂಲಭೂತವಾದ ಕೂಡ ಬೆಳೆದೆದ್ದು ಮಹಿಳೆಯರನ್ನು ಪಿತೃಪ್ರಧಾನ ಶೋಷಣೆಯ ಖಾಸಗಿ ವಲಯಕ್ಕೆ ಮತ್ತೆ ದೂಡುತ್ತಿದೆ. ರಾಜಕೀಯ ನಾಯಕರು ಕೇವಲ ಗೊಂದಲಕ್ಕೊಳಗಾದ ಗುಂಪು ಆಗಿದ್ದು ಬಲಪಂಥೀಯರು ಮತ್ತು ಎರಡು ಮೂರು ಪಕ್ಷಗಳ ಸಂಯುಕ್ತ ಕೇಂದ್ರ ಸರ್ಕಾರದ ಮಧ್ಯೆ ಹೊಯ್ದಾಡುತ್ತಿದ್ದಾರೆ. (BJP, Cong, TDS ಎಂದು) ಅವಕಾಶವಾದಿ ರಾಜಕಾರಣ, ಮತ ಬ್ಯಾಂಕುಗಳ ಲಾಭಗಾರಿಕೆಗಳು ಲಿಂಗತ್ವದ ಪ್ರಶ್ನೆ ಬಗ್ಗೆ ಸಹಾನುಭೂತಿ ಹೊಂದಿಲ್ಲ. ಈ ಪರಿಸ್ಥಿತಿಯಲ್ಲಿ ಜಾತಿ, ಲಿಂಗ, ಧರ್ಮ, ವರ್ಗಗಳನ್ನೆಲ್ಲ ಮೀರಬಲ್ಲ ರಾಜಕೀಯ ಪಕ್ಷಗಳಿಗೂ ತಮ್ಮ ಒಳರಚನೆಗಳಲ್ಲಿ ಮಹಿಳೆಯರನ್ನು ಸಂಘಟಿಸುವುದು, ಅವರಿಗೆ ತಮ್ಮ ಸಂಘಟನೆಗಳಲ್ಲಿ ಸ್ಥಾನಾವಕಾಶ ನೀಡುವುದು ನಿಜಕ್ಕೂ ಸವಾಲಾಗಿದೆ. ಸಾಮಾಜಿಕ ಗುಂಪುಗಳು ದೀರ್ಘಕಾಲದ ಹೋರಾಟದಿಂದ ಸಂಪಾದಿಸಿದ್ದ ಜನತಾಂತ್ರಿಕ ಸ್ಥಳಾವಕಾಶಗಳು, ಉದ್ಯೋಗದ ಮೀಸಲಾತಿ ಮುಂತಾದವು ಈಗ ಅಪಾಯದ ಭೀತಿ ಎದುರಿಸುತ್ತಿವೆ. ಮಹಿಳೆಯರು ಈಗ ಸ್ಥಾನಪಲ್ಲಟ, ನಿರುದ್ಯೋಗ, ಹೆಚ್ಚುತ್ತಿರುವ ಬಡತನ ಹಾಗೂ ತೀವ್ರಗೊಂಡ ಪಿತೃಪ್ರಾಧಾನ್ಯದ ಶೋಷಣೆಗಳನ್ನು ಎದುರಿಸುತ್ತಿದ್ದಾರೆ. ಬಂಡವಾಳಶಾಹಿ ಸಮಾಜದ ಶೋಷಣೆಯನ್ನೂ, ಕೌಟುಂಬಿಕವಾದ ಶೋಷಣೆಯನ್ನೂ ಎದುರಿಸಲೇಬೇಕಾದ ಹಾಗೆ ಅವರನ್ನು ಗೋಡೆಗೆ ಒತ್ತಿಹಿಡಿದಂತಾಗಿದೆ.

7. ಹೊಸ ರೀತಿಯ ಹಿಂಸಾಚಾರಗಳು ಇಂದು ಮಹಿಳೆಯರ ಮೇಲೆ ಜರುಗುತ್ತಿವೆ. ಸ್ತ್ರೀಭ್ರೂಣ ಹತ್ಯೆ, ಆ್ಯಸಿಡ್ ಆಕ್ರಮಣಗಳು, ಹೊಸ ಬಗೆಯ ವರದಕ್ಷಿಣೆ ಆಗ್ರಹಗಳು ಎಲ್ಲವೂ ಮಹಿಳೆಯರನ್ನು ಸರಕೀಕರಿಸುವುದರ ಫಲವಾಗಿದೆ. ಮಹಿಳೆಯರನ್ನು ಮಾನವರೆಂದು, ಅವರ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಭಾವಿಸುತ್ತಿಲ್ಲ. ಮಹಿಳೆಯರ ಮೇಲಿನ ಹಿಂಸಾಚಾರಗಳು ಹೆಚ್ಚಿರುವುದಕ್ಕೆ ಕೆಲವು ಕಾರಣಗಳು ಹೀಗಿವೆ:
   i. ಮಹಿಳೆಯರ ಮೇಲೆ ಹಿಂಸೆ ನಡೆಯುತ್ತಿರುವುದರ ವಿರುದ್ಧ ಸಮಾಜದಲ್ಲಿ ಯಾವುದೇ ನಿಯಂತ್ರಣಗಳಾಗಲಿ, ಸಮತೋಲನದ ವ್ಯವಸ್ಥೆಯಾಗಲಿ ಇಲ್ಲವಾಗಿರುವುದು. ವರದಕ್ಷಿಣೆ ಕೊಲೆಯಿರಲಿ, ಲೈಂಗಿಕ ಹಿಂಸಾಚಾರದ ಕೇಸುಗಳಿರಲಿ, ಬೇರೆ ಯಾವುದೇ ಇರಲಿ ಪ್ರಗತಿಪರ ಕಾನೂನುಗಳಿದ್ದರೂ ಅವುಗಳು ಜಾರಿಗೆ ಬಾರದಿರುವುದು. ಪೊಲೀಸರೂ ಕೋರ್ಟುಗಳಲ್ಲೂ ನಿಧಾನತಂತ್ರ ಅನುಸರಿಸುವುದು ಮತ್ತು ಕ್ರಮವನ್ನು ತಿರುಚುವುದರಿಂದ ತಪ್ಪಿತಸ್ಥರನ್ನು ದಂಡಿಸುವ ಮೂಲಕ ನ್ಯಾಯವೊದಗಿಸುವ ಸಾಧ್ಯತೆ ಇಲ್ಲವೇ ಇಲ್ಲ ಎಂಬ ನಂಬಿಕೆ ಬೇರೂರಿ ಹೋಗಿದೆ. ಶೇಕಡ 95ರಷ್ಟು ಸಂದರ್ಭಗಳಲ್ಲಿ ತಪ್ಪಿತಸ್ಥರು ಬಿಡುಗಡೆಯಾಗಿ ಹೋಗುತ್ತಾರೆ. ಈಗ ದೇಶದ ಕಾನೂನುಗಳನ್ನು ಕಠಿಣವಾಗಿ ಜಾರಿಗೊಳಿಸಿದರೆ ಮಾತ್ರ ಈ ಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಸಾಧ್ಯ.
   ii. ಸಮಾಜದ ಎಲ್ಲ ಸ್ತರಗಳಲ್ಲೂ ಲಿಂಗತ್ವ ಸಂವೇದನೆ ಬೆಳೆಸುವ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ನಡೆಸಬೇಕು. ಸಾರ್ವಜನಿಕವಾದ ಉತ್ತರದಾಯಿತ್ವದ ಅಭಾವ (ರಾಜಕೀಯ ನಾಯಕರೇ ದ್ವಿಪತ್ನಿತ್ವ ಆಚರಿಸುವುದು, ಹೆಂಡತಿಯರನ್ನು ಥಳಿಸುವುದು ಇತ್ಯಾದಿ) ದೇಶದ ಕಾನೂನಿನ ಬಗ್ಗೆ ಕಿಂಚಿತ್ತೂ ಗೌರವ ತೋರದಿರುವುದು ಇಂಥವುಗಳನ್ನು ಜನರು ಗಂಭೀರವಾಗಿ ಪರಿಗಣಿಸಬೇಕಾಗಿದೆ.
   iii. ಖಾಸಗೀಕರಣದತ್ತ ವೇಗವಾಗಿ ಚಲಿಸುತ್ತಿರುವ ಇಂದಿನ ಸಾಮಾಜಿಕ ಸಂರಚನೆ ಸ್ತ್ರೀಯರ ಸಬಲೀಕರಣಕ್ಕೆ ವಿರುದ್ಧವಾಗಿದೆ. ಅದು ಪಿತೃಪ್ರಾಧಾನ್ಯದ ಮುಷ್ಟಿಯನ್ನು ಬಿಗಿಗೊಳಿಸುತ್ತಿದೆ. ಸಂಕುಚಿತ ಮನೋಭಾವ. ಅದು ಸ್ತ್ರೀಪರವಾಗಿಲ್ಲ. ಕೌಟುಂಬಿಕ ಸಾಂಪ್ರದಾಯಿಕ ಚೌಕಟ್ಟಿಗೇ ಅವರನ್ನು ಅದು ಹಿಂದೂಡುತ್ತಿದೆ. ಅವರ ಶಿಕ್ಷಣ ಸ್ವಾತಂತ್ರ್ಯ, ಸಂಗಾತಿಯ ಆಯ್ಕೆ, ಉದ್ಯೋಗವನ್ನು ಆರಿಸಿಕೊಳ್ಳುವುದನ್ನೂ ಅದು ನಿರಾಕರಿಸುತ್ತಿದೆ.

   ಸಾಮುದಾಯಿಕ ಮಟ್ಟದ ನಡುಪ್ರವೇಶ ವಿಧಾನಗಳನ್ನು ಇಂದು ವಿಚಾರಮಾಡಬೇಕಾದ್ದು ಅಗತ್ಯವಿದೆ. ಆ ಸ್ತರದಲ್ಲಿ ಸೃಷ್ಟಿಯಾಗುವ ಸಮಸ್ಯೆಗಳು, ದೌರ್ಜನ್ಯಗಳನ್ನು ಆ ಸಾಮುದಾಯಿಕ ಗುಂಪುಗಳೇ ನಿರ್ವಹಿಸಲು ಇದರಿಂದ ಸಾಧ್ಯವಾಗಬಹುದು.

8. 1980 ಮತ್ತು 1985ರಲ್ಲಿ ನಡೆದ ಸ್ವಾಯತ್ತ ಮಹಿಳಾ ಸಂಘಟನೆಗಳ ಜಾಗತಿಕ ಸಮ್ಮೇಳನಗಳಲ್ಲಿ ಸೈದ್ಧಾಂತಿಕ ಹೋರಾಟವೇ ಗಂಭೀರ ಚರ್ಚೆಗೆ ಒಳಪಟ್ಟಿತ್ತು. ಸಮಾಜವಾದಿ ಸ್ತ್ರೀವಾದಿಗಳು, ಪಿತೃಪ್ರಾಧಾನ್ಯವಾದಿ ಸ್ತ್ರೀವಾದಿಗಳು ಮತ್ತು ಉದಾರವಾದಿ ಸ್ತ್ರೀವಾದಿಗಳು ಸೈದ್ಧಾಂತಿಕವಾದ ಮನನಗೊಳ್ಳುವಿಕೆ ಮಹಿಳಾ ಚಳವಳಿಗೆ ಅವಶ್ಯಕವೆಂದು ತೀವ್ರವಾಗಿ ವಾಗ್ವಾದ ನಡೆಸಿದ್ದರು. ಆದರೆ ಸಾಮಾಜಿಕ ಸಕ್ರಿಯತೆ ಹೆಚ್ಚತೊಡಗಿದಂತೆ ಚಳವಳಿಯು ಮಹಿಳೆಯರ ಬದುಕುಗಳ ಅನೇಕ ಸಾಮಾಜಿಕ – ರಾಜಕೀಯ ಸಮಸ್ಯೆಗಳಿಗೆ ವಿಸ್ತಾರಗೊಳ್ಳತೊಡಗಿತು. ಮಹಿಳೆಯರು ಮತ್ತು ದುಡಿಮೆ; ಮಹಿಳೆಯರು ಮತ್ತು ವಸತಿ, ಹೀಗೆಯೇ ಆರೋಗ್ಯ, ಮಹಿಳಾ ಅಧ್ಯಯನಗಳು, ಕೋಮುವಾದ, ಮಾಧ್ಯಮಗಳು, ಸಂಸ್ಕೃತಿ, ಕಾನೂನು, ಹಿಂಸಾಚಾರ, ರಾಜಕೀಯ ಮೀಸಲಾತಿ, ಒಬ್ಬಂಟಿ ಮಹಿಳೆಯರ ಸಮಸ್ಯೆ, ವಿವಿಧತೆಯಲ್ಲಿ ಏಕತೆ ಮುಂತಾಗಿ ಎಲ್ಲ ಕ್ಷೇತ್ರಗಳಿಗೂ ಚಳವಳಿ ಹರಡಿಕೊಳ್ಳತೊಡಗಿದ್ದು, ಲೈಂಗಿಕ ಅಲ್ಪಸಂಖ್ಯಾತರ ಪ್ರಶ್ನೆ ಕೂಡ ಅದರಲ್ಲಿ ಸೇರಿತು (1988, 1990, 1993, 1997 ಮತ್ತು 2006ರಲ್ಲಿ ನಡೆದ ಸಮ್ಮೇಳನಗಳು ಕ್ರಮವಾಗಿ ಈ ವಿಷಯಗಳತ್ತ ದೃಷ್ಟಿ ಹರಿಸಿದ್ದವು). ಈ ರೀತಿ ಚಳವಳಿಯ ವ್ಯಾಪ್ತಿಯು ಹೆಚ್ಚಾದಂತೆ ಸೈದ್ಧಾಂತಿಕತೆಯ ಪ್ರಶ್ನೆಗಳು ಹಿಂದಕ್ಕೆ ಸರಿದವು.

   ಭಾರತೀಯ ಮಹಿಳಾ ಚಳವಳಿ ಎಲ್ಲಾ ಗುಂಪುಗಳನ್ನು ಒಟ್ಟಾಗಿ ಕಾಯ್ದಿಡಲು ವಿಸ್ತಾರವಾದ ನೆಟ್‌ವರ್ಕ್ ರಚಿಸಿಕೊಂಡಿತು. ಎಡ ಪಂಥದ ವಿಶಾಲದೃಷ್ಟಿಯ ಪ್ರಗತಿಪರ ಹಾದಿಯೊಂದನ್ನು ಆಯ್ದುಕೊಂಡು ಪಿತೃಪ್ರಧಾನ ವ್ಯವಸ್ಥೆಯ ಮತ್ತು ಅದರ ಶೋಷಣೆಗಳ ವಿರುದ್ಧವಾಗಿ ಉದ್ದಕ್ಕೂ ಹೋರಾಟಮಾಡುತ್ತ ಬಂದಿವೆ. ಪಕ್ಷ ರಾಜಕಾರಣದಲ್ಲಿ ಆಸಕ್ತಿ ಹೊಂದಿಲ್ಲದ ಸ್ವಾಯತ್ತ ಮಹಿಳಾ ಗುಂಪುಗಳನ್ನು ಅನುಸರಿಸಿದ್ದು ಇದಕ್ಕೆ ಮುಖ್ಯಕಾರಣವಿರಬಹುದು. ಸಮಸ್ಯೆ ಆಧರಿಸಿದ ಸಕ್ರಿಯತೆಗೆ ಅದರದೇ ಆದ ಮಿತಿಗಳಿರುತ್ತವೆ. ಅದು ವಿಮೋಚನೆಯ ಪ್ರಶ್ನೆಯ ಬಗ್ಗೆ ಮೌನವಾಗಿಯೇ ಉಳಿದಿದೆ. ವಿಶಾಲವಾದ ಜನತಾಂತ್ರಿಕ ಚಳವಳಿಗಳ ಬಗ್ಗೆಯಾಗಲಿ, ಅಂಥ ಹೋರಾಟದಲ್ಲಿ ತೊಡಗಿರುವ ಜನಸಮುದಾಯಗಳ ಬಗ್ಗೆಯಾಗಲಿ

ಮಹಿಳಾ ಚಳವಳಿ ವಿಶೇಷ ಆಸಕ್ತಿ ತೋರಿಸಿಲ್ಲ. ಅದನ್ನು 'ಮತೀಯ ವಾದಿ ಚಳವಳಿ' (sectarian movement) ಎಂದೂ ಹಲವರು ಕರೆದದ್ದುಂಟು. ಏನೇ ಆದರೂ ಅಧಿಕಾರಕ್ಕೆ ಏರದ ಕೆಲವು ಎಡಪಕ್ಷಗಳು 1990ರಲ್ಲೂ, ಅನಂತರವೂ ಮಹಿಳಾ ಚಳವಳಿಯ ಸೈದ್ಧಾಂತೀಕರಣದ ಬಗ್ಗೆ ಗಂಭೀರ ಚರ್ಚೆಯನ್ನು ನಡೆಸಿವೆ. ದುಡಿಮೆಗಾರ ಮಹಿಳೆಯರೂ ವರ್ಗ ಚಳವಳಿಯ ಭಾಗ ತಾನೆ. ಪಿತೃಪ್ರಾಧಾನ್ಯ ಶೋಷಣೆಯೊಳಗೆ ಒಂದು ಆರ್ಥಿಕಾಂಶವೂ ಸೇರಿದೆ. ಅದು ಮಹಿಳೆಯರ ದುಡಿಮೆಯನ್ನು ಎಂದೂ ಸಾಮಾಜಿಕವಾಗಿ ಗುರುತಿಸಲಾರದು. ಎಡಪಂಥೀಯರು ಮಹಿಳಾ ಸಮಸ್ಯೆಗಳಿಗೆ ಆದ್ಯತೆ ಒದಗಿಸಲು, ತಮ್ಮ ಪಕ್ಷದಲ್ಲಿ (ನಿರ್ಣಯಾತ್ಮಕ ಜಾಗಗಳಲ್ಲಿ) ಅವರಿಗೆ ಅವಕಾಶ ಕಲ್ಪಿಸಲು ಸಿದ್ಧರಾದಲ್ಲಿ ಅದು ಮಹಿಳಾ ಚಳವಳಿಗೆ ಸಂಘಟನಾತ್ಮಕವಾಗಿ ಲಾಭಕರವೇ ಸರಿ.

ಜಗತ್ತಿನಾದ್ಯಂತ ಸ್ತ್ರೀವಾದಿಗಳು ಪಿತೃಪ್ರಾಧಾನ್ಯದ ಸಮಸ್ಯೆಗಳ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದು ಅದಕ್ಕೂ ಇಂದಿನ ಸಮಾಜಿಕ ಸಂರಚನೆಗಳಿಗೂ ಇರುವ ಸಂಬಂಧವನ್ನು ಗಮನಿಸುತ್ತಲೇ ಬಂದಿದ್ದಾರೆ. ಮಹಿಳಾ ಚಳವಳಿಯು ಎತ್ತಿರುವ ಪ್ರಶ್ನೆಗಳನ್ನು NGO ಗಳು ದೊಡ್ಡ ಸಂಖ್ಯೆಯಲ್ಲಿ ಕೈಗೆತ್ತಿಕೊಳ್ಳುತ್ತಿದ್ದು, ಅವುಗಳಿಂದ ನಮ್ಮ ಸೈದ್ಧಾಂತಿಕ ಕ್ಷೇತ್ರಕ್ಕೆ ಹೆಚ್ಚೇನೂ ನೆರವು ದೊರೆಯಲಾರದು. ಚಳವಳಿಯಲ್ಲಿರುವ ಸೈದ್ಧಾಂತಿಕ ಪಂಥಗಳನ್ನು ಕುರಿತಂತೆ ಕೆಲವು ಅಕಾಡೆಮಿಕ್ ಬುದ್ಧಿಜೀವಿಗಳು ಪುಸ್ತಕಗಳನ್ನು ರಚಿಸಿದ್ದಾರೆ. ಅವು ಮಹಿಳಾ ಅಧ್ಯಯನಗಳಿಗೆ ಪಠ್ಯ ಪುಸ್ತಕಗಳಾಗಿವೆ ಅಷ್ಟೆ

9. 'ಸ್ವಾಯತ್ತ ಮಹಿಳಾ ಚಳವಳಿ' ಭಾರತದಲ್ಲಿ ಲಿಂಗತ್ವ ಸಂವೇದಿತ್ವಕ್ಕೆ ಪ್ರಗತಿಪರ ಕಾನೂನುಗಳ ಸೃಷ್ಟಿಗೆ ಮತ್ತು ಮಹಿಳಾ ದೃಷ್ಟಿಕೋನವನ್ನು ಬೆಳೆಸಲಿಕ್ಕೆ ಬಹಳಷ್ಟು ಕಾಣಿಕೆ ಸಲ್ಲಿಸಿದೆ. ಆ ಕಾಣಿಕೆಯನ್ನು ಯಾರೂ ಇಲ್ಲವೆಂದು ಒತ್ತರಿಸುವಂತಿಲ್ಲ. ಹಾಗಿದ್ದೂ ತನ್ನ ಪ್ರಯತ್ನದಲ್ಲಿ ಉದ್ದಕ್ಕೂ ಅದು ಪ್ರತಿಯೊಂದು ನಿಟ್ಟಿನಲ್ಲೂ ವಿರೋಧವನ್ನು ಎದುರಿಸಿದೆ. ಚಳವಳಿಯ ಮುಂದಿದ್ದ ಸವಾಲುಗಳು ಬಹುದೊಡ್ಡ ಪ್ರಮಾಣದಲ್ಲಿದ್ದವು. ಅವುಗಳಲ್ಲಿ ತೀರಾ ಕಠಿಣವಾದ ಸವಾಲು ಎಂದರೆ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿಯದು. ಆ ಬಿಲ್ಲು ಇನ್ನೂ ನೆನೆಗುದಿಯಲ್ಲಿ ಬಿದ್ದಿರುವುದೇ ದೊಡ್ಡ ಸವಾಲು. ಹೀಗೆ ಅನೇಕ ಮಿತಿಗಳು ಈ ಚಳವಳಿಗೆ ಇದ್ದರೂ (ಮಧ್ಯಮ ವರ್ಗದ ಗುಂಪುಗಳನ್ನೇ ಆಧರಿಸಿದೆ ಮುಂತಾಗಿ) ಜನತಾಂತ್ರಿಕ ಚಳವಳಿಗೆ ಇದೂ ಕಾಣಿಕೆ ನೀಡಿದೆ ಎಂಬುದಂತೂ ನಿಶ್ಚಿತ.

ಈ ಚಳವಳಿಯ ತಳಹಾಸು ವಿಸ್ತರಿಸಿಕೊಳ್ಳಬೇಕು. ಎಂದರೆ, ಸ್ತ್ರೀವಾದಿ ದೃಷ್ಟಿಕೋನವುಳ್ಳ ಮಹಿಳೆಯರು ನೇತೃತ್ವ ವಹಿಸಿಕೊಂಡು ಸಮಾಜದ ಎಲ್ಲ ಸ್ತರದ ಮಹಿಳೆಯರನ್ನೂ ಕ್ರಮಬದ್ಧವಾಗಿ ಸಂಬೋಧಿಸಲು ಮುಂದಾಗಬೇಕು. ಮಹಿಳೆಯರು ಹೀಗೆ ಮುಂದಾಳ್ತನ ವಹಿಸಿ ಪ್ರಗತಿಪರ ದೃಷ್ಟಿಯುಳ್ಳ ಹೊಸ ಎಡಪಕ್ಷಗಳೊಂದಿಗೆ ಸೇರಿದ್ದಾದರೆ ಅದು ಆದರ್ಶಪ್ರಾಯವಾದೀತು. ವರ್ಗೀಯ ಗುಂಪುಗಳನ್ನು ಸಂಬೋಧಿಸಿ ಸಂಘಟಿಸುವ ಮೂಲಕ ತಮ್ಮ ತಳಹದಿಯನ್ನು ವಿಸ್ತರಿಸಿಕೊಳ್ಳುವುದೇ (ಚಳವಳಿಗಾರರಿಗೆ) ಈಗಿರುವ ಮುಖ್ಯ ಪ್ರಶ್ನೆ. ಎಲ್ಲ ರೀತಿಯ ಸಾಮಾಜಿಕ ಚಳವಳಿಗಳ ಜೊತೆ – ಅವು ದಲಿತರದಿರಲಿ, ರೈತರದಿರಲಿ, ನಾಗರಿಕ ಚಳವಳಿಗಳೇ ಇರಲಿ, ಅವುಗಳೊಂದಿಗೆ – ತನ್ನ ಸಂಬಂಧವನ್ನು ಮಹಿಳಾ ಚಳವಳಿ ಬೆಸೆದುಕೊಳ್ಳುವ ಮೂಲಕ ತನ್ನನ್ನು ವಿಸ್ತರಿಸಿಕೊಳ್ಳಬೇಕು. ಕೇವಲ 'ಮಹಿಳಾ ಚಳವಳಿ' ಎಂಬ ಪದವನ್ನು ಬದಲಾಯಿಸಿದರೆ ಅದರಿಂದ ಪರಿಸ್ಥಿತಿ ಏನೂ ಬದಲಾಗದು. ನಮ್ಮ ಕಾರ್ಯವಿಧಾನಗಳ ಬಗ್ಗೆ ಪುನರ್ಮನನ ಅವಶ್ಯಕವಾಗಿ ನಡೆಯಬೇಕು. ಇದೇ ಮಹಿಳಾ ಚಳವಳಿಯಲ್ಲಿ ಕ್ರಾಂತಿಕಾರೀ ಬದಲಾವಣೆಗೆ ಇರುವ ದಾರಿ.

10. ಒಬ್ಬ ವಿಜ್ಞಾನಿಯಾಗಿ ನನಗೆ ದುಡಿಮೆಯ ಪರಿಸರ ಸಾಕಷ್ಟು ಸ್ನೇಹಪೂರ್ಣವಾಗಿದ್ದು ಲಿಂಗತ್ವ ನಿರಪೇಕ್ಷವೇ ಆಗಿತ್ತು. ಬೇರೆ ಕೆಲವು ವಿಭಾಗಗಳಲ್ಲಿ ಲಿಂಗತ್ವ ಆಧರಿತ ತಾರತಮ್ಯಗಳು ಇದ್ದವು. CFTRI ನಲ್ಲಿದ್ದ ಮಹಿಳಾ ಉದ್ಯೋಗಿಗಳು 1982–83ರಲ್ಲಿ ಪೀತ ಪತ್ರಿಕೋದ್ಯಮ ನಡೆಸುತ್ತಿದ್ದ ವಾರಪತ್ರಿಕೆಯೊಂದರ ವಿರುದ್ಧವಾಗಿ ಪ್ರತಿಭಟನೆ ನಡೆಸಿದ್ದರು. ಆ ವಿಷಯದಲ್ಲಿ ಪರಿಹಾರಕ್ಕಾಗಿ ನಾವು ಭಾರತೀಯ ಪ್ರೆಸ್‌ಕೌನ್ಸಿಲ್‌ಗೇ ಮೊರೆ ಹೋಗಬೇಕಾಯಿತು. ಒಬ್ಬ ಮಹಿಳೆ ತಮ್ಮ ವಿಭಾಗದ ಮುಖ್ಯಸ್ಥರ ದೌರ್ಜನ್ಯದ ವಿರುದ್ಧವಾಗಿ ಕರ್ನಾಟಕ ಮಹಿಳಾಆಯೋಗದ ಬಳಿಗೆ ನ್ಯಾಯಕ್ಕಾಗಿ ಮನವಿ ಸಲ್ಲಿಸಿದ್ದರು. ವಿಜ್ಞಾನ ಕ್ಷೇತ್ರ. ತನ್ನಷ್ಟಕ್ಕೆ ಲಿಂಗತ್ವ ನಿರಪೇಕ್ಷಿಯಾಗಿರಬೇಕು. ಆದರೆ, ನಮ್ಮ ಸಾಮಾಜಿಕ – ಸಾಂಸ್ಕೃತಿಕ ಪರಿಸರ ಪಿತೃಪ್ರಾಧಾನ್ಯದಿಂದಲೇ ರೂಪುಗೊಂಡದ್ದು. ಆದ್ದರಿಂದ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸುವಲ್ಲಿ, ಶ್ರೇಷ್ಠ ಸಾಧನೆಗಾಗಿ ಪ್ರಶಸ್ತಿ ನೀಡುವಲ್ಲಿ ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯಂತೆಯೇ ನಡೆಸಿಕೊಳ್ಳುವುದು ರೂಢಿಗತವಾಗಿದೆ. ಶ್ರೇಣೀಕರಣದಲ್ಲಿ ಮಹಿಳೆಯರು ಮೇಲೇರುವುದನ್ನು ತಡೆಹಿಡಿವಂಥ ಸೂಕ್ಷ್ಮ ಗಾಜಿನಿಂದ ತಯಾರಾದ ಮೇಲ್ಛಾವಣಿ ಇದ್ದೇ ಇರುತ್ತದೆ. ಮಹಿಳೆಯರು ವಿಭಾಗ ಮುಖ್ಯಸ್ಥರಾಗುವುದಾಗಲಿ, ಅಥವಾ ಸಂಸ್ಥೆಯ ನಿರ್ದೇಶಕರಾಗುವುದಾಗಲೀ ತೀರಾ ವಿರಳ. ಈ ಬಗ್ಗೆ ಮಹಿಳೆಯರು ವಾಸ್ತವಿಕ ಅರಿವು ಬೆಳೆಸಿಕೊಳ್ಳಬೇಕಿದೆ. ಇಂಥ ಸವಾಲುಗಳನ್ನು ಸಾಮೂಹಿಕ ಕ್ರಮದಿಂದ ಎದುರಿಸಲು, ದುಡಿಮೆಯ ಸಂಸ್ಕೃತಿಯನ್ನು ಜನತಾಂತ್ರಿಕಗೊಳಿಸಲು, ತಮ್ಮ ಪರಿಶ್ರಮ, ದುಡಿಮೆಗಳಿಗೆ ಮಾನ್ಯತೆ ಗಳಿಸಿಕೊಳ್ಳಲು ಇಂಥ ಅರಿವುಳ್ಳ ಯತ್ನಗಳನ್ನು ನಡೆಸಬೇಕು. ❑

"....ನಾನು ಸಾಹಿತ್ಯ ರಚನೆ ಪ್ರಾರಂಭಿಸಿದಾಗ ಉತ್ತರ ಕರ್ನಾಟಕದಲ್ಲಿ ಮಹಿಳೆ, ಅದೂ ಪದವೀಧರಳಲ್ಲದವಳು ಕಥೆ ಬರೆಯುವುದು ಸಾಧ್ಯವಿರಲಿಲ್ಲ. ಅವರ ಪತಿ ಮಾಳವಾಡರೇ ಬರೆದು ಪತ್ನಿಯ ಹೆಸರು ಹಾಕುತ್ತಿದ್ದಾರೆ ಎಂದು ಕೆಲವರು ಅಂದರೆ, ವಿಮರ್ಶಕರೊಬ್ಬರು ಮಾಸ್ತಿಯವರ ಕಥೆಯೊಂದಿಗೆ ನನ್ನ ಕಥೆಯನ್ನು ಹೋಲಿಸಿ, ನನ್ನ ಮನ ಕಹಿಯಾಗುವಂತೆ ಮಾಡಿದರು. ....ನಾನು ಛಲದಿಂದ ಮಹಿಳೆಯರನ್ನು ಕುರಿತೇ ಹೆಚ್ಚಾಗಿ ಬರೆದೆ. ಅದೇ ವಿಮರ್ಶಕರೊಂದಿಗೇ ನನಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿತು....."

– **ಶಾಂತದೇವಿ ಮಾಳವಾಡ** *(ಲೇಖ–ಲೋಕ – 4)*



ಮಹಿಳಾ ವಿಮರ್ಶೆ ಮತ್ತು ಸಂಶೋಧನೆ

• *ಡಾ. ಪ್ರೀತಿ ಶುಭಚಂದ್ರ*

ಸಂಪಾದಕೀಯದಲ್ಲಿ ನಾವು ಸೂಚಿಸಿರುವಂತೆ ಡಾ. ಪ್ರೀತಿ ಶುಭಚಂದ್ರ ಅವರು ಮಹಿಳಾ ಸಾಹಿತ್ಯ ಕುರಿತ ವಿಮರ್ಶೆಗಳ ಹಿನ್ನೆಲೆಯಲ್ಲಿ ಹೊಸ ನೋಟವೊಂದನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಪ್ರಬಂಧ ದೀರ್ಘವಾದ್ದರಿಂದ ಕಂತುಗಳಲ್ಲಿ ಪ್ರಕಟಿಸುವುದು ಅನಿವಾರ್ಯವಾಗಿದೆ. ಓದುಗರು ಈ ಲೇಖನ ಮಾಲೆಯನ್ನು ವಿಶೇಷವಾಗಿ ಗಮನಿಸಿ ಪ್ರತಿಕ್ರಿಯಿಸಲೆಂಬುದು ನಮ್ಮ ಆಶಯ. – ಸಂ.

ಜ್ಞಾನದ ಬಗೆಗೆ ಸ್ತ್ರೀವಾದಿ ಅಧ್ಯಯನಗಳು ಪ್ರಕಟಿಸಿರುವ ನಿಲುವುಗಳು ರೂಢಿಬದ್ಧ ಸಾಹಿತ್ಯ ಅಧ್ಯಯನಗಳಲ್ಲಿ ಗೊಂದಲಮಯ ತಲ್ಲಣಗಳನ್ನು ಉಂಟುಮಾಡಿವೆ. ಸೌಲಭ್ಯಸಂಪನ್ನ ರಾಷ್ಟ್ರ, ಜನಾಂಗ, ಲಿಂಗ, ವರ್ಣ, ವರ್ಗ ಕೇಂದ್ರಿತ ಅಧಿಕಾರ ವ್ಯವಸ್ಥೆಯಲ್ಲಿನ ಜ್ಞಾನಪ್ರಕ್ರಿಯೆಯೇ ಶೋಷಣೆಯ ರೂಪ ಧರಿಸಬಲ್ಲದು. ಸ್ತ್ರೀವಾದಿ ಅಧ್ಯಯನಕಾರನಾದ ಕೆ.ಕೆ.ರುಡ್‌ವೆನ್ನನಿಗೆ ಸ್ತ್ರೀವಾದಿ ಪಠ್ಯಗಳನ್ನು ಕರಗತಮಾಡಿಕೊಳ್ಳುವ ತನ್ನ ಪುರುಷ ಪ್ರಯತ್ನವೇ ಅಧಿಕಾರ ಸ್ಥಾಪನೆಯ ಹುನ್ನಾರವಾಗಿಬಿಡಬಹುದೇನೋ ಎನಿಸಿದೆ. ಈ ಯತ್ನ ಅತ್ಯಾಚಾರವೂ ಹೌದು ಎಂಬ ಆತಂಕ, ಅಪರಾಧಿಭಾವ ಆತನನ್ನು ಕಾಡಿದೆ. ಜ್ಞಾನದ ಪರಿಪೂರ್ಣ ಸ್ಥಿತಿಯ ದ್ಯೋತಕವಾಗಿ ತಾನು ಜ್ಞಾನಿ ಎಂಬುದನ್ನೇ ಪ್ರಜ್ಞೆಯ ಸಂಗತಿಯಾಗಿ ಉಳಿಸದಿರುವ ಅನುಭಾವಿಕ ಆದರ್ಶ ಪರಂಪರೆ ಇದೆ. ನಿತ್ಯ ದೈನಿಕದಲ್ಲಿ ಇಂಥ ಆದರ್ಶ ಕಲ್ಪನೆಗಳು ಹುಟ್ಟುಹಾಕುವ ದ್ವಂದ್ವಗಳಿಗೆ ಮಹಿಳಾ ವಿಮರ್ಶೆ ಹಾಗೂ ಸಂಶೋಧನೆ ಕೂಡ ಹೊರತಲ್ಲ. ಜ್ಞಾತೃ ಸ್ಥಾನೀಯತೆ ಕಲ್ಪಿಸಿಕೊಡುವ ಎಲ್ಲ ಅವಕಾಶ ಅನುಕೂಲಗಳನ್ನು ವಿಮರ್ಶಾಕಾರ್ಯದಾಚೆ ಇರಿಸಲು ಸಾಧ್ಯವೇ ಇಲ್ಲ ಎಂಬ ಸಂದಿಗ್ಧ ಈ ಹೊತ್ತಿನದು. ಈ ಸಮಸ್ಯೆಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ವಿಮರ್ಶೆಯ ವಿಮರ್ಶೆ (meta criticism)ಯಾಗಿ ಮಹಿಳಾ ವಿಮರ್ಶೆಯನ್ನು ಭಾಷಿಕವಾಗಿ ಪರ್ಯಾಲೋಚಿಸುವ ಅಗತ್ಯವಿದೆ. ಅನ್ಯಥಾ ಮಾರ್ಗವೇ ಇಲ್ಲ. ಸ್ತ್ರೀವಾದಿ ಭಾಷಾ ವಿಜ್ಞಾನಿಗಳು ಹೇಳುವಂತೆ, ಭಾಷೆ ಎಂಬ ಬಂಧನದಲ್ಲಿರುವ ಬಂದಿ ಪುರುಷನಾದರೆ, ಆ ಬಂದಿಯ ಬಂದಿಯಾಗಿ ಮಹಿಳೆಯಿದ್ದಾಳೆ.

ಪಶ್ಚಾತ್ತಾಪದ ಲೇಪನವುಳ್ಳ ಜ್ಞಾತೃಸ್ಥಾನೀಯ ಅಧಿಕಾರ ಕ್ರೌರ್ಯವನ್ನು ಬಿಂಬಿಸುವ ಪ್ರಾತಿನಿಧಿಕ ಕತೆ – ಆನಂದರ 'ನಾನು ಕೊಂದ ಹುಡುಗಿ'. ಕತೆಯ ನಿರೂಪಕ ತಾನು ಬಳಸುವ ಕ್ಯಾಮೆರಾದಷ್ಟೇ ನಿರ್ಭಾವುಕನಾಗಿ ವಸ್ತುನಿಷ್ಠ ನೈತಿಕ ಬೋಧೆ ಮಾಡಬಲ್ಲವ. ತಾ ಸೆರೆಹಿಡಿದ ಪ್ರಕೃತಿ ಸೌಂದರ್ಯದ ಆಸ್ವಾದನೆಯಂತೆಯೇ ಹೆಣ್ಣಿನ ಚೆಲುವನ್ನು ಆಸ್ವಾದಿಸುವ ರಸಿಕನೀತ. ತನ್ನ ಕಾಮನೆಗಳ ನಿಯಂತ್ರಕ ಶಕ್ತಿಯಾಗಿ ತನ್ನ 'ಪ್ರೇಮಿ–ಪತಿ'ತ್ವವನ್ನು ಅವಲಂಬಿಸುವಷ್ಟು ದುರ್ಬಲ. ತನ್ನನ್ನೊಳಗೊಂಡ ಸಾಂಸ್ಕೃತಿಕ ರಚನೆಯ ಉತ್ಪನ್ನವಾದ ಬಸವಿ ಸಂಪ್ರದಾಯದ ಶೋಧಕ್ಕೆ ಈತ ಮುಂದಾಗಲಾರ. 'ಧರ್ಮ–ಅಧರ್ಮಗಳ ತುಲನೆ ಮಾಡುವುದಕ್ಕೆ ನಾನು ಯಾರು?' ಎಂದು ತನ್ನ ಅಧಿಕಾರವನ್ನು ಪ್ರಶ್ನಿಸುತ್ತ ತನ್ನೆಲ್ಲ ತಳಮಳಗಳಿಗೆ ಉತ್ತರ ಹುಡುಕಲೆತ್ನಿಸುತ್ತಾನೆ. ಏಕಕಾಲಕ್ಕೆ ಗರತಿತನ ಹಾಗೂ ಬಸವಿತನಗಳ ನಡುವಿನ ಸಾಂಸ್ಕೃತಿಕ ದ್ವಂದ್ವಮಾನತೆಯನ್ನು ಗಂಡು ಕಲಾರಸಿಕತೆ ನೈತಿಕ ಚಾಕಚಕ್ಯತೆಯಿಂದ ಮುಚ್ಚಿಹಾಕಲೆತ್ನಿಸುತ್ತದೆ. ಹೀಗೆ ಮುಚ್ಚಿ ಹಾಕಲ್ಪಟ್ಟ ಅನೇಕ ವಿಸಂಗತಿಗಳನ್ನು ಮಹಿಳಾ ವಿಮರ್ಶೆ ಪ್ರಕಾಶಗೊಳಿಸುತ್ತದೆ. ಪಾತರ ಸಂಪ್ರದಾಯದ ಬಗ್ಗೆ ಅಧ್ಯಯನ ನಡೆಸಿದ ಶೈಲಜಾ ಹಿರೇಮಠ, ದೇವದಾಸಿ ಸಂಪ್ರದಾಯದ ಬಗೆಗೆ ಸಂಶೋಧನೆ ಕೈಗೊಂಡ ಜೋಗನ್ ಶಂಕರ್, ಕಮಲಾ ಹೆಮ್ಮಿಗೆಯವರು ಎತ್ತುವ ಪ್ರಶ್ನೆಗಳು ಇಡೀ ಸಾಂಸ್ಕೃತಿಕ ರಚನೆಯ ಬುಡವನ್ನೇ ಅಲುಗಿಸುವಂಥವು. ವಾಸ್ತವವಾದಿ ನೆಲೆಯಿಂದ ವೇಶ್ಯಾಸಮಸ್ಯೆಯನ್ನು ಪ್ರತಿನಿಧೀಕರಣಗೊಳಿಸುವ ಕೆಲ ಪ್ರಗತಿಶೀಲರ ಕಾದಂಬರಿಗಳನ್ನು ನಿರಂಜನರು 'ಕಸದ ತಿಪ್ಪೆ' ಎಂದಿದ್ದಾರೆ. ವಸ್ತುನಿಷ್ಠ ಚಿತ್ರಣ ನೀಡುವ ಉದ್ದೇಶದಲ್ಲಿ ಸ್ತ್ರೀಪಾತ್ರಗಳ ಆಂತರಿಕ ಬದುಕನ್ನು ವಿಚಾರ ಹಾಗೂ ಭಾವನೆಗಳ ನೆಲೆಯಲ್ಲಿ ವಿವೇಚಿಸುವಷ್ಟು ವ್ಯವಧಾನ ಈ ಲೇಖಕರಿಗಿರಲಿಲ್ಲ. ಪಾತ್ರ, ಸನ್ನಿವೇಶಗಳ ಮೇಲೆಯೇ ಗಮನವಿಟ್ಟು, ಬದುಕು ಹೇಗಿದೆ ಎಂಬುದನ್ನು ವಿವರಿಸುವಲ್ಲಿ ಅವರ ಕಲಾಶಕ್ತಿ ವ್ಯಯವಾಯಿತು. ಆದರೆ ಈ ಬದುಕು ಹೀಗೆ ಯಾಕೆ ಇದೆ ಎಂಬ ಪ್ರಶ್ನೆಯನ್ನು ಮುಖ್ಯವಾಗಿಟ್ಟುಕೊಳ್ಳಲಿಲ್ಲ. ನಿಜ ಬದುಕಿನಲ್ಲಿ ತ್ರಿವೇಣಿಯವರು ವೇಶ್ಯೆಯನ್ನು ಕಂಡಿರಲಿಲ್ಲವಂತೆ. ಒಬ್ಬಾಕೆಯನ್ನು ಇವಳು ವೇಶ್ಯೆ ಎಂದು ಅವರ ಪತಿ ಶಂಕರ್ ಅವರು ತೋರಿಸಿದಾಗ 'ವೇಶ್ಯೆ ಹೀಗೆ ಇರುತ್ತಾರಾ?' ಎಂದು ಆಶ್ಚರ್ಯಪಟ್ಟರಂತೆ. ಲೇಖಕಿಯಾಗಿ ತ್ರಿವೇಣಿಗಿರುವ ಸೀಮಿತ ಜೀವನಾನುಭವಕ್ಕೆ ನಿದರ್ಶನವಾಗಿ ಈ ಪ್ರಸಂಗವಿದೆ ಎಂದು ಅನಿಸಬಹುದು. ಆದರೆ ತ್ರಿವೇಣಿ ವಾಸ್ತವವನ್ನು ಮನಸ್ಸೆಂಬ ಕ್ಯಾಮೆರಾ ಯಂತ್ರದ ಮೂಲಕ ಹಿಡಿದಿಟ್ಟುಕೊಂಡಿಲ್ಲ; ಕತೆಗಾರ ಆನಂದರಂತೆ. ವೇಶ್ಯಾ ಬದುಕಿನ ವಾಸ್ತವವನ್ನು ಹೀಗಾಗಿ 'ಹೇಗೆ' ಸಂಭವಿಸಿತೆಂಬ ವರ್ಣನಾತ್ಮಕ ನಿರೂಪಣೆಯಲ್ಲಿ ಹಿಡಿದಿಟ್ಟಿಲ್ಲ. ಮಹಿಳಾ ಪಾತ್ರಗಳ ಆಂತರಿಕ ಲೋಕವನ್ನು ನಿರಾಕರಿಸದೇ ವಾಸ್ತವವನ್ನು, 'ಯಾಕೆ' ಸಂಭವಿಸಿತು ಎಂಬ ಶೋಧದ ಮೂಲಕ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. 'ಹೂವು–ಹಣ್ಣು' ಕಾದಂಬರಿಯ ರಮಾ ವೇಶ್ಯೆ ಹೇಗೆ ಆದಳೆಂಬುದಕ್ಕೆ ತ್ರಿವೇಣಿ ಪ್ರಾಶಸ್ತ್ಯ ಕೊಟ್ಟಿದ್ದಿದ್ದರೆ ಬರಹರೂಪದ ಅತ್ಯಾಚಾರವೇ ಆಗುತ್ತಿತ್ತು. ಹಾಗಾಗಿ ಕಥನದ ಭಾಷೆ ಸೆಕ್ಸಿಸ್ಟ್ ಆಗಿಲ್ಲ. ರಮಾಳನ್ನು ಮಾನವ ಮನೋದೇಹಿಯಾಗಿ ಉಳಿಸಿರುವುದರಲ್ಲಿಯೇ ತ್ರಿವೇಣಿಯವರ ವಿಮರ್ಶಾತ್ಮಕ ಎಚ್ಚರವಿದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಶುದ್ಧ ಮಾನವ ಪ್ರೇಮಾಭಿವ್ಯಕ್ತಿಗೆ ಆಸ್ಪದವಿಲ್ಲದ್ದನ್ನು ಇ.ಪಿ. ರೈಸ್ ಎತ್ತಿ ಹಿಡಿಯಲು ಕಾರಣವಿದೆ. ಸಾಹಿತ್ಯ ಕೃತಿಗಳ ರಚನೆ, ಆಸ್ವಾದನೆಗಳು ಪ್ರತಿಷ್ಠಿತ ವಲಯಗಳಿಗೆ ಮಾತ್ರ ಸೀಮಿತವಿದ್ದಂಥ ವಿಕ್ಟೋರಿಯನ್ ಯುಗ ದಲ್ಲಿ ವಾಸ್ತವತೆಯನ್ನು ಮುಕ್ತವಾಗಿ ಕಾದಂಬರಿ ಕಾರರು ಒಳಗೊಳ್ಳಲೆತ್ನಿಸಿದರು. ನೀತಿ, ಕಾನೂನು, ಆಸ್ತಿ, ಯುದ್ಧ, ಪ್ರೇಮ ಇವುಗಳೊಂದಿಗೆ ದೈಹಿಕ ಕಾಮನೆಗಳನ್ನು ಭೌತಿಕ ವಾಸ್ತವವಾಗಿ ಪರಿಭಾವಿಸಿ ದರು. ಮಾನವ ಅಸ್ತಿತ್ವದ ವಾಸ್ತವಗಳ ಕುರಿತಾದ ತಾತ್ವಿಕ ಅರಿವನ್ನು ಹೊಂದುವುದೇ ಒಂದು ವಿಶೇಷ ಸವಲತ್ತೆಂದು ಶಿಕ್ಷಿತವರ್ಗ ಭಾವಿಸಿತ್ತು. ಹತ್ತೊಂಬತ್ತು ಹಾಗೂ ಇಪ್ಪತ್ತನೇ ಶತಮಾನಗಳ ಪೂರ್ವಾರ್ಧದ ಹೊತ್ತಿಗಾಗಲೇ ಶಿಕ್ಷಿತವರ್ಗದ ವಲಯ ವಿಸ್ತಾರ ವಾಗಿತ್ತು. ಅರೆಶಿಕ್ಷಿತ ಕೆಳಮಧ್ಯಮ ವರ್ಗ ಹಾಗೂ ಸ್ವಯಂ ಶಿಕ್ಷಿತ ಶ್ರಮಿಕ ವರ್ಗಗಳು ಬೃಹತ್ ಓದುಗ ಸಮುದಾಯವಾಗಿ ಸಿದ್ಧಗೊಂಡಿದ್ದವು. ಸಮೂಹ ಕ್ಕೆಲ್ಲಾ ಸಾರಿ ಹೇಳಲಾಗದಂಥ ಖಾಸಗಿ ವಿಷಯಗಳ ಬಗ್ಗೆ ಮಧ್ಯಮ ವರ್ಗೀಯ ಲೇಖಕ ವ್ಯಕ್ತಿಗೆ ನಿರ್ಬಂಧಗಳಿದ್ದವು. ಕೃತಿಯಲ್ಲಿ ಲೈಂಗಿಕ ವಿಷಯ ವುಳ್ಳ ಕಾರಣಕ್ಕೆ ಲೇಖಕನಿಗೆ ದಂಡನೆಯನ್ನು ನ್ಯಾಯವಾದಿ ವಿಧಿಸಿದ ನಿದರ್ಶನವಿದೆ: ಪ್ರೇಮ ಸಂಬಂಧಿ ಆನಂದವನ್ನು ಆಯ್ದ ಸುಶಿಕ್ಷಿತ ಜನಕ್ಕೆ ವಿವರಿಸುವುದು ತಪ್ಪೇನೂ ಅಲ್ಲ. ಆದರೆ ಶ್ರಮಜೀವಿ ವರ್ಗದ ಮಹಿಳೆಯೊಬ್ಬಳ ಕೈಗೆ ಇಂಥ ಕೃತಿ ದೊರಕುವಂತಾದರೆ ಅದು ಬೇರೆಯೇ ಸಂಗತಿ. ಆಗ ಕೃತಿ ಸೆನ್ಸಾರ್‌ಗೆ ಒಳಪಟ್ಟು ದಂಡನಾರ್ಹವೂ ಆಗುತ್ತದೆ ಎಂಬ ತೀರ್ಪು ಹೊರಬಂತು. (The Novel and the people, Ralph Fox, Foreign languages publishing house, Moscow, 1954, p.104-05) ಮಹಿಳಾ ಓದುಗ ವಲಯವೂ ಹೆಚ್ಚು ವಿಸ್ತರಿತಗೊಳ್ಳುತ್ತಿದ್ದ ಕಾಲದಲ್ಲಿ ಏರ್ಪಟ್ಟ ಇಂಥ ನಿರ್ಬಂಧಗಳು ಸಾಹಿತ್ಯ ಸೃಷ್ಟಿಯನ್ನೇ ಕ್ರಾಂತಿಕಾರಕವಾಗಿ ಬದಲಾಯಿಸಿದವು. ಈ ನಿರ್ಬಂಧಕ್ಕೆ ಪ್ರತಿಕ್ರಿಯೆಗಳು ಎರಡು ರೂಪದಲ್ಲಿ ಹೊರಬಂದವು. 1) ವಾಸ್ತವದ ಮೇಲೆ ರಮ್ಯತೆಯ ಮುಸುಗನ್ನು ಹಾಕಿಕೊಂಡ ನವೋದಯ ಸಾಹಿತ್ಯ, 2) ಸೃಜನಶೀಲತೆಗೆ ನಿರ್ಬಂಧವೊಡ್ಡುವ ಓದುಗ ಸಮೂಹವನ್ನು ಧಿಕ್ಕರಿಸಿ, ಕಲಾವಿದ ಸಾಮರ್ಥ್ಯದಲ್ಲಿ ಇನ್ನಿಲ್ಲದ ನೆಚ್ಚಿಗೆ ಹೊಂದಿದ ಸ್ವಾಯತ್ತ ಶುದ್ಧ ಕಲಾ ಪಂಥ.

ಕನ್ನಡದ ಮಹಾಕಾವ್ಯ ಪರಂಪರೆ ಏಕಕಾಲಕ್ಕೆ ಸೀಮಿತ ಶ್ರೋತೃವೃಂದವನ್ನೂ ಬಹುಸಂಖ್ಯೆಯ ಧಾರ್ಮಿಕ ಶ್ರದ್ಧೆಯುಳ್ಳ ಶ್ರೋತೃಗಳನ್ನೂ ಹೊಂದಿತ್ತು. ಸಮಾಜ–ವ್ಯಕ್ತಿಯ ನಡುವಿನ ಸರಿಹೊಂದಾಣಿಕೆ ಇದ್ದ ಮಹಾಕಾವ್ಯ ಪರಂಪರೆಗೆ ವಾಸ್ತವವನ್ನು ಹೋರಾಟ ಮಾಡಿ ಕಲಾರೂಪದಲ್ಲಿ ದಕ್ಕಿಸಿಕೊಳ್ಳಬೇಕಾದ ಅನಿವಾರ್ಯತೆ ಇರಲಿಲ್ಲ. ಅದರಲ್ಲಿಯೂ ಧಾರ್ಮಿಕ ಕಾವ್ಯಗಳು ಅಚಾರಿತ್ರಿಕ ಸ್ವರೂಪದವು. ವೈದಿಕ ಕಾವ್ಯಕ್ಕೆ ವಾಸ್ತವಿಕತೆಯ ಆವರಣ ಕಲ್ಪಿಸಲು ಹೊರಟ ಪಂಪನ 'ಚರಿತ್ರೆ'ಯ ತರ್ಕಕ್ಕೆ ದ್ರೌಪದಿಯ ಪಂಚ ಪತಿತ್ವ ತೊಡಕಾಯ್ತು. ವೇಶ್ಯಾವಾಟಿಕೆಗಳ ವರ್ಣನೆಯೂ ಅಷ್ಟಾದಶ ವರ್ಣನೆಗಳಲ್ಲಿ ಸ್ಥಾನ ಪಡೆದಿದ್ದು ಅರಸನ ಲೋಕಜ್ಞಾನ ವಿಸ್ತರಣೆಗೆ ಅವಕಾಶ ನೀಡುವ ತಾಣವಾಗುತ್ತದೆ.

ವೇಶ್ಯಾವಾಟಿಕೆಯಂಥ ಅನಿರ್ಬಂಧ ತಾಣಗಳು 'ದೇಸಿ'ಯ ಸೊಗಡುಳ್ಳವಾದ ಕಾರಣ ಮಹಾಕಾವ್ಯ ಬಂಧಕ್ಕೆ ಅನಿವಾರ್ಯ ಅಗತ್ಯವೆನಿಸಿದವು. ಆದರೆ ದ್ರೌಪದಿಯ ಪಂಚಪತಿತ್ವ ಹಾಗೂ ಆರನೆಯವನನ್ನು ಕುರಿತ ಅವಳ ಬಯಕೆಗಳು 'ಗರತಿ' ಚೌಕಟ್ಟಿನಾಚೆ ಉಳಿದ ಸಂಗತಿಗಳಾಗಿದ್ದವು. ಈ ವಿಸಂಗತಿಯನ್ನು, ತಗುಳ್ಚುವ ತಂತ್ರದಲ್ಲಿ ಯಶಸ್ವಿಯಾದ ಪಂಪನಿಗೆ ನಿರ್ವಹಿಸುವುದು ತೊಡಕಿನ ಸಂಗತಿಯಾಯಿತು. ಮಹಾಭಾರತದ ಜಂಬೂವೃಕ್ಷಫಲ ಪ್ರಕರಣವನ್ನು ಕುರಿತ ವಿಮರ್ಶೆ ಈ ವಿಸಂಗತಿಯನ್ನು ಕೊಂಚ ದೂರ ಮಾಡಲು ಯತ್ನಿಸಿದೆ. ಕೆ. ವೆಂಕಟರಾಯಾಚಾರ್ಯರು ಸಂಸ್ಕೃತ ಜೈಮಿನಿಭಾರತದ ಮೂಲ ಪದ್ಯವನ್ನು ವ್ಯಾಖ್ಯಾನಿಸುತ್ತ, ದ್ರೌಪದಿಯ ಶುಚಿತ್ವವನ್ನು ಹಿಡಿಯಲೆತ್ನಿಸುತ್ತಾರೆ. ಸತ್ಯಭಾಮಾದಿಗಳು ಕೃಷ್ಣನನ್ನು ವಶೀಕರಿಸಲಸಮರ್ಥರಾಗಿದ್ದರೂ ದ್ರೌಪದಿ ಮಾತ್ರ ಐವರು ಪತಿಗಳನ್ನಲ್ಲದೆ ಆರನೆಯವನಾಗಿ ಕೃಷ್ಣನನ್ನೂ ವಶೀಕರಿಸಿದ್ದಳು – ಅವನಲ್ಲಿ ಆಕೆ ಇಟ್ಟ ಅನನ್ಯ ನಂಬಿಕೆಯಿಂದಾಗಿ. (ಸತ್ಯಭಾಮಾ ದ್ರೌಪದಿ ಸಂವಾದ, ಅಶ್ವಮೇಧ ಪರ್ವ (12–57). ದೈವೀಶ್ರದ್ಧೆ ನಂಬಿಕೆಗಳ ವಲಯದಲ್ಲಿ ಪವಾಡ, ಅವತಾರ ಕಲ್ಪನೆಗಳು ಢಾಳಾಗಿರುವಾಗ ಸ್ತ್ರೀಪಾತ್ರಗಳ ಬಗೆಗಿನ ಇಂಥ ವಿಸಂಗತಿಗಳು ತೊಡಕಾದರೂ ತೀವ್ರ ಸವಾಲುಗಳನ್ನೊಡ್ಡಲಿಲ್ಲ. ಏಕೆಂದರೆ ಕಾವ್ಯವನ್ನು ಪುಣ್ಯಾಂಗನೆ, ಕೊಡಗೂಸು ಕನ್ನಿಕೆಯಂತೆ; ನಾಟಕದ ಪ್ರೇಕ್ಷಕಾನುಭವವು ಸುರತಾನುಭವದಂತೆ ಎಂಬ ಕಾವ್ಯಮೀಮಾಂಸೆಯಲ್ಲಿ ಮಹಿಳಾ ಓದುಗರ ಹಾಗೂ ಪ್ರೇಕ್ಷಕರ ಕಲ್ಪನೆಗೆ ಸ್ಥಾನವೇ ಇಲ್ಲ. ಕಂಪನಿ ನಾಟಕಗಳ ವೀಕ್ಷಣೆಗೆ ಕುಲೀನ, ಸಭ್ಯ ಮಹಿಳೆಯರಿಗೆ ಅವಕಾಶವಿರಲಿಲ್ಲ. ಇಂಥ ನಿರ್ಬಂಧ ಮೀರಿಯೂ ಮಹಿಳೆಯರು ನಾಟಕಗಳತ್ತ ಆಕರ್ಷಿತರಾಗುತ್ತಿರುವುದನ್ನು ತಪ್ಪಿಸಲು ಮನೆಯಲ್ಲೇ ನಾಟಕವನ್ನು ಓದಿ ಸಂತೋಷಪಡಲೆಂದು ತಾನು ನಾಟಕ ಬರೆಯುತ್ತಿದ್ದೇನೆ ಎಂದು ಆಧುನಿಕ ನಾಟಕಕಾರನೊಬ್ಬ ಅರಿಕೆ ಮಾಡಿಕೊಂಡಿದ್ದಾನೆ. ಇಷ್ಟಾಗಿ, ಪುರುಷ ಕಲಾರಸಿಕತೆಯಲ್ಲಿ ಸ್ಥಾನ ಪಡೆದ 'ವೇಶ್ಯೆ' ಸಾಮಾಜಿಕ ನೈತಿಕ ವಲಯದಲ್ಲಿ ನಿಷೇಧಿತಳಾದವಳು. ನಾಟಕ ನೋಡ ಹೋದ ತನ್ನನ್ನು ಪ್ರತಿಷ್ಠಿತ ಕುಲೀನ ಮಹಿಳೆಯೊಬ್ಬಳು ಬೈದು ಅವಮಾನಪಡಿಸಿದ್ದನ್ನು ಕೈಲಾಸಂ ನಾಟಕದ 'ಸೂಳೆ' ವೇಶ್ಯಾ ಸಮಸ್ಯೆ ಬಗ್ಗೆ ಕಳಕಳಿಯಿಂದ ಅಧ್ಯಯನ ಮಾಡುವಾಕೆಗೆ ನಿವೇದಿಸಿಕೊಳ್ಳುತ್ತಾಳೆ. ಕುಲೀನ ಮಹಿಳೆಯರು ಹಾಗೂ ವೇಶ್ಯಾಸ್ತ್ರೀಯರಿಗಾಗಿ ಪ್ರತ್ಯೇಕ ಆಸನ ಪದ್ಧತಿ ನಾಟಕ ಮಂದಿರಗಳಲ್ಲಿತ್ತು. ಪುರುಷ ರಸಿಕತೆ ಹಾಗೂ ನೈತಿಕತೆಗಳು ಮಹಿಳಾ ಸಮುದಾಯದೊಳಗೇ ಕಲ್ಪಿಸಿದ ಇಂಥ ಪ್ರತ್ಯೇಕತೆಯ ಪರಿಣಾಮಗಳನ್ನು ವಾಸ್ತವವಾದಿ ನೆಲೆಯಲ್ಲಿ ಸಮಗ್ರವಾಗಿ ಗ್ರಹಿಸುವುದು ಆಧುನಿಕ ಸಾಹಿತ್ಯದ ದೊಡ್ಡ ಸವಾಲೇ ಆಗಿತ್ತು. ಈ ಸವಾಲು ಪ್ರಾಚೀನ ಕನ್ನಡ ಸಾಹಿತ್ಯಕ್ಕಿರಲಿಲ್ಲ. ಹೋರಾಡಿ ಸತ್ತ ವೀರನಿಗೆ ಸ್ವರ್ಗಲೋಕದ ಅಪ್ಸರೆಯರೂ ತಪಸ್ಸು ಮಾಡಿ ಕೇವಲ ಜ್ಞಾನ ಗಳಿಸಿಕೊಂಡವನಿಗೆ ಮೋಕ್ಷಲಕ್ಷ್ಮಿಯೊಂದಿಗೆ ಸಂಯೋಗವೂ ಲಭ್ಯವೆಂಬ ಮೌಲ್ಯ ಕಲ್ಪನೆ ಪ್ರಶ್ನಾತೀತವಾಗಿತ್ತು. ಯುದ್ಧ ವೀರ, ತಪೋವೀರರಿಗೆ ದೊರಕುವ ಸ್ತ್ರೀಭೋಗ ಕಲಾರಸಿಕ ವೀರರಿಗೂ ಲಭ್ಯವೆಂಬ ಸಾಮಾಜಿಕ ನಿಯಮ ಸಂಹಿತೆಯನ್ನು ಆಧುನಿಕ ಸಾಹಿತ್ಯ ಅಂಗೀಕರಿಸಲು ಅದರದೇ ಆದ ಹಿಂಜರಿಕೆಗಳಿದ್ದವು. ವಸಾಹತು ಶಿಕ್ಷಣದಿಂದ ಕಟ್ಟಿಕೊಂಡ ಉದಾರವಾದಿ ಮಾನವತಾವಾದಿ 'ವ್ಯಕ್ತಿತ್ವ'ವು ಪ್ರಾಚೀನ ಕಾವ್ಯ ಸಂಪ್ರದಾಯದೊಂದಿಗಿನ ಸಂಬಂಧವನ್ನು ವ್ಯಾಖ್ಯಾನಿಸಿಕೊಂಡಿತು. ಆ ಕಾವ್ಯ ಸಂಪ್ರದಾಯದ ಹಿನ್ನೆಲೆಯ ಸಾಮಾಜಿಕ ನಿಯಮ ಸಂಹಿತೆಯೊಂದಿಗೆ ತನ್ನ ಸಂಬಂಧ ದೂರವನ್ನು ಎಚ್ಚರಿಕೆಯಿಂದ ಕಲ್ಪಿಸಿಕೊಳ್ಳ ಲೆತ್ನಿಸಿತು. ಈ ಎಚ್ಚರಕ್ಕೆ 1921ರಲ್ಲಿ ಪ್ರಕಟವಾದ ಇ.ಪಿ. ರೈಸ್‌ರ 'ಕನ್ನಡ ಸಾಹಿತ್ಯ ಚರಿತ್ರೆ' ಪರೋಕ್ಷವಾಗಿ ಕಾರಣವಾಗಿದೆ. ಕನ್ನಡ ಸಾಹಿತ್ಯದ ಗುಣವೈಶಿಷ್ಟ್ಯಗಳನ್ನು ರೈಸ್ ಮುನ್ನುಡಿಯಲ್ಲಿ ಪಟ್ಟಿ ಮಾಡುತ್ತಾರೆ :

"ಭಾರತೀಯ ಸಾಹಿತ್ಯವೂ ಸೇರಿದಂತೆ ಕನ್ನಡ ಕಾವ್ಯದಲ್ಲಿ ಶುದ್ಧ ಮಾನವ ಪ್ರೇಮಾಭಿವ್ಯಕ್ತಿಗೆ ಅವಕಾಶವಿಲ್ಲದುದು ದೊಡ್ಡ ಲೋಪ. ಪಶ್ಚಿಮದಲ್ಲಿ ಇದು ಹೊಂದಿದ

ಸಮೃದ್ಧಿ, ಪಡೆದ ಮಹತ್ವಗಳನ್ನು ಇಲ್ಲಿನ ಕಾವ್ಯ ಒಳಗೊಳ್ಳದಿರಲು ಮಹಿಳೆಯರು ಹೊಂದಿರುವ ಕೆಳದರ್ಜೆಯ ಸ್ಥಾನಮಾನವೇ ಕಾರಣ. ಬಾಲ್ಯ ವಿವಾಹ ಪದ್ಧತಿಯಿಂದಾಗಿ ಸಹಜವಾಗಿ ಪ್ರಬುದ್ಧ ಯುವ ಪ್ರೇಮಿಗಳಲ್ಲಿ ಅರಳಬೇಕಾದ ರಮ್ಯ ಪ್ರಣಯದ ಭಾವಾಭಿವ್ಯಕ್ತಿಗೆ ಅವಕಾಶವಿಲ್ಲದಂತಾಯ್ತು. ಬಾಲ್ಯವಿವಾಹವು ಇನ್ನುಳಿದ ಕೆಲ ಅಪಾಯಗಳಿಂದ ರಕ್ಷಣೆ ನೀಡಬಹುದಾದರೂ ಸಾಹಿತ್ಯದ ಮೇಲಾದ ಪರಿಣಾಮವೇನೆಂದರೆ, ಪ್ರಿಯತಮೆಯ ಜಾಗವನ್ನು ಆಸ್ಥಾನದ ಕಲಾವಂತಿಯರು ತುಂಬಿದರು. ಶುದ್ಧ ಪ್ರೇಮದ ಆರೋಗ್ಯಪೂರ್ಣ ಅನುಭೂತಿಗೆ ಬದಲಾಗಿ ವಾಕರಿಕೆ ತರಿಸುವ ಕಾಮೋದ್ದೀಪಕ ವರ್ಣನೆಗಳು ಕಾವ್ಯದ ಬಹುಪಾಲನ್ನು ವಿರೂಪಗೊಳಿಸಿದವು. ಇದಕ್ಕೆ ಪರ್ಯಾಯವೆಂದರೆ ದಮಯಂತಿ, ಸೀತೆ, ಸಾವಿತ್ರಿಯರ ಪತಿನಿಷ್ಠೆಯ ಮಾದರಿಗಳು ವಿಜೃಂಭಿಸಿದವು..." (Edward P. Rice, History of Kanarease Literature, (2nd ed.). Oxford University Press, 1921, p.106)

ರೈಸ್‌ರ ಈ ಮಾತುಗಳು ಏಕಕಾಲಕ್ಕೆ ಪ್ರಾಚೀನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭವನ್ನು ವ್ಯಾಖ್ಯಾನಿಸುವಲ್ಲಿ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡಿವೆ. 'ಶುದ್ಧ ಮಾನವ ಪ್ರೇಮ'ದ ಅಭಿವ್ಯಕ್ತಿಯು ಆಧುನಿಕ ಕನ್ನಡ ನವೋದಯ ಸಾಹಿತ್ಯದ ಕೇಂದ್ರ ಆಶಯವೂ ಆಗಿತ್ತು. ಇಂಥ ಅಭಿವ್ಯಕ್ತಿಗೆ ಹೊರತಾದ ಭಾಗಗಳನ್ನು ಪ್ರಾಚೀನ ಕೃತಿ ಸಂಪಾದನೆ, ಸಂಗ್ರಹ ಕಾರ್ಯಗಳಲ್ಲಿ ಅಶ್ಲೀಲ, ಅನಗತ್ಯವೆಂದು ಕೈಬಿಡಲಾಯ್ತು. ತಪ್ಪನ್ನು ಮುಚ್ಚಿ ಒಪ್ಪನ್ನು ಪ್ರಕಟಿಸುವುದೇ ನವೋದಯ ಸಂದರ್ಭದ ಕೃತಿವಿಮರ್ಶೆಯ ಆಶಯವಾಗಿತ್ತು. ಹಾಗಾಗಿ ಸಂಗ್ರಹಕಾರ್ಯಗಳಲ್ಲಿ ಕೈಬಿಟ್ಟ ಈ ಭಾಗಗಳು ವಿಮರ್ಶೆಯಲ್ಲಿ ಸ್ಥಾನ ಪಡೆಯಲಿಲ್ಲ. ವಸಾಹತು ಶಿಕ್ಷಣದ ಪರಿಣಾಮವಾಗಿ ನೆಲೆಗೊಂಡ ಪ್ಯೂರಿಟನ್ ಪ್ರಜ್ಞೆ ಕನ್ನಡ ನವೋದಯರ ಕಾವ್ಯಮೀಮಾಂಸೆಯ ಚೌಕಟ್ಟಿನಲ್ಲಿ ವೇಶ್ಯೆಯ ಸ್ಥಾನದ ಬದಲಿಗೆ ಸಖಿ–ಪ್ರಿಯೆ–ತಾಯಿ–ದೇವಿ'ಯರನ್ನು ಸ್ಥಾಪಿಸಿತು. ಸೃಜನಪ್ರಕ್ರಿಯೆಗೆ ಸಂಬಂಧಿಸಿದ್ದಂತೆ ಪ್ರಜನನ ರೂಪಕ ಜನಪ್ರಿಯವಾದುದು. ವೇಶ್ಯಾಭೋಗವನ್ನು ಒಂದು ತುದಿಯಾಗಿಯೂ ಭಕ್ತ–ದೈವ ಸಂಯೋಗವನ್ನು ಮತ್ತೊಂದು ತುದಿಯಾಗುಳ್ಳ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಬದಲಾವಣೆಯುಂಟಾಯಿತು. ಇವೆರಡನ್ನೂ ಕೈಬಿಟ್ಟು ಉದಾರವಾದಿ ಮಾನವತಾವಾದಿ ಮೀಮಾಂಸೆಯನ್ನು ನವೋದಯರು ಕಟ್ಟಿಕೊಂಡರು. ಶರೀರ–ಆತ್ಮ ಸಂಬಂಧದ ಸಾಮಾಜಿಕತೆಯಲ್ಲಿ ಸೃಜನಶೀಲತೆಯನ್ನು ವಿವರಿಸಿಕೊಳ್ಳಲಾಯ್ತು. ವೇಶ್ಯೆಗೆ ಪ್ರತಿಯಾಗಿ ಶುದ್ಧತೆಯ ಸಂಕೇತವಾದ 'ಸ್ತ್ರೀ' ಕೇಂದ್ರಿತ ಮೀಮಾಂಸೆಯನ್ನು ಕಟ್ಟಿಕೊಳ್ಳಲಾಯ್ತು. ಈ ಮೀಮಾಂಸೆ ನಿರ್ದೇಶಿಸುವ ವಿಮರ್ಶಾ ಮಾನದಂಡಗಳು ಸಮಕಾಲೀನ ಮಹಿಳಾ ಸೃಜನಶೀಲತೆಯನ್ನು ಗೌಣ ನೆಲೆಗೆ ದೂಡಿದವು. ರಾಷ್ಟ್ರೀಯವಾದಿ ಸಮಾಜ ಸುಧಾರಣಾ ಪ್ರಯತ್ನಗಳು ಮಹಿಳಾ ಕೇಂದ್ರಿತವಾಗಿ ಜರುಗಿದರೂ ಮಹಿಳೆಯನ್ನು ಸೀಮಿತ ನೆಲೆಯಲ್ಲಿ ಪರಿಭಾವಿಸಲಾಯ್ತು. ಸತೀ ಪದ್ಧತಿ ನಿಷೇಧಕ್ಕಾಗಿ ರಾಜಾರಾಂ ಮೋಹನ್‌ರಾಯ್ ನಡೆಸಿದ ಪ್ರಯತ್ನವನ್ನು ಆಶಿಷ್ ನಂದಿ ಸಾಮಾಜಿಕ ಮನೋವಿಶ್ಲೇಷಣಾತ್ಮಕ ದೃಷ್ಟಾಂತ ರೂಪಕವಾಗಿ ವ್ಯಾಖ್ಯಾನಿಸುತ್ತಾರೆ. ರಾಜಾರಾಮ್ ಮೋಹನ್‌ರಾಯರ ವ್ಯಕ್ತಿತ್ವ ವಿಶ್ಲೇಷಣೆಯಲ್ಲಿ ಅವರ ತಂದೆ ಹಾಗೂ ತಾಯಿಯರು ವಸಾಹತು ಸಂದರ್ಭದಲ್ಲಿ ಹೊಂದಿದ ಕೌಟುಂಬಿಕ ಪಾತ್ರ ಪಲ್ಲಟಗಳನ್ನು ಮುಖ್ಯವಾಗಿ ಚರ್ಚಿಸುತ್ತಾರೆ. ಚಾರಿತ್ರಿಕ ಪ್ರವೃತ್ತಿ ಮತ್ತು ವ್ಯಕ್ತಿ ವಿಶಿಷ್ಟತೆಗಳನ್ನು ನಂದಿಯವರು ಬೆರೆಸುವ ಯತ್ನ ಜ್ಞಾನರೂಪಣೆಯ ವೈಧಾನಿಕತೆಯ ಹಿಂಸೆಗೆ (epistemic violence) ಪೂರಕವಾಗಿ ನಿಲ್ಲಬಲ್ಲದು. ಸತೀ ನಿಷೇಧವನ್ನು ವೈಯಕ್ತಿಕ ಬದುಕಿನ ನಾಟಕೀಯ ಸಂಘರ್ಷದ ಪರಿಹಾರೋಪಾಯವಾಗಿ ರಾಯ್ ಆಯ್ಕೆ ಮಾಡಿಕೊಂಡದ್ದು ಅವರ ಮಿತಿಯಾಗಬಹುದು. ಆದರೆ ವಿಧವೆ ಮಹಿಳೆಯರ ಆಂತರಿಕ ಬದುಕಿನ ತಲ್ಲಣಗಳನ್ನು ಮುಖ್ಯವಾಗಿಟ್ಟುಕೊಂಡ ತಾತ್ವಿಕರೂಪವನ್ನು ಆಶಿಶ್‌ನಂದಿಯವರ ದೃಷ್ಟಾಂತ ಪ್ರತಿಭೆ ಒಳಗೊಳ್ಳುವುದಿಲ್ಲ. ಸತೀ ಪದ್ಧತಿ ನಿಷೇಧವನ್ನು ಮೋಹನ್‌ರಾಯರ ವ್ಯಕ್ತಿಗತ ಅವಶ್ಯಕತೆಯಾಗಿ ಕೂಡ ಅರ್ಥೈಸುವಲ್ಲಿ ಅನುಭವಗಮ್ಯತೆ (empiricist) ಹಾಗೂ ಚಾರಿತ್ರಿಕ ಸೈದ್ಧಾಂತಿಕತೆಗಳನ್ನು ಮೇಳವಿಸಲು ಆಶಿಶ್‌ನಂದಿ ನೋಡಿದ್ದಾರೆ. ಆದರೆ ಇಡೀ ಪ್ರಕರಣವನ್ನು ವಿಧವೆಯ ನೆಲೆಯಲ್ಲಿ ಅರ್ಥೈಸಿದ್ದಿದ್ದರೆ ಅವರ ವ್ಯಾಖ್ಯಾನಕ್ಕೆ ಮತ್ತೂ ಹೆಚ್ಚಿನ ಅಧಿಕೃತತೆ ಒದಗುತ್ತಿತ್ತು. ಆಶಿಶ್‌ನಂದಿಯವರ ಈ ಮಿತಿ ನಮಗೆ ತಿರುಮಲಾಂಬಾ, ಆರ್. ಕಲ್ಯಾಣಮ್ಮನವರ ವಾಚಿಕೆಯನ್ನು ಸಿದ್ಧಪಡಿಸಿ, ಅವರ ಕೃತಿ ಸಂದರ್ಭವನ್ನು ವಿಮರ್ಶಿಸಿದ ವಿಜಯಾ ದಬ್ಬೆ ಹಾಗೂ ಬಿ.ಎಸ್. ಸುಮಿತ್ರಾಬಾಯಿಯವರ ಕೃತಿಗಳಿಂದ ಪ್ರತೀತವಾಗುತ್ತದೆ. ಸತೀ ಪದ್ಧತಿ ನಿಷೇಧದೊಂದಿಗೆ ಇನ್ನಿತರ ಸಮಾಜ ಸುಧಾರಣಾ ಕಾರ್ಯಗಳಾದ ಬಾಲ್ಯವಿವಾಹ ನಿಷೇಧ, ಸ್ತ್ರೀಶಿಕ್ಷಣಗಳಿಗೆ ವ್ಯಕ್ತಿಗತ ನೆಲೆಯಲ್ಲಿ ವಿವರಣೆ ನೀಡಲು ಸಾಧ್ಯವಾಗದು. ರಾಷ್ಟ್ರೀಯವಾದಿ ಆಂದೋಲನಕ್ಕೆ ಸ್ಪಷ್ಟವಾಗಿ ಎರಡು ಮಾದರಿಯ ಬಿಡುಗಡೆಯ ಕಲ್ಪನೆ ಪ್ರಚುರಗೊಂಡಿತು. ಮೊದಲನೆಯದು ಪುನರುತ್ಥಾನದ ಮಾದರಿ, ಎರಡನೆಯದು ವಿಕಾಸವಾದದ ಮಾದರಿ. ಇಲ್ಲಿ ಪುನರುತ್ಥಾನದ ಮಾದರಿಯು ವಿಕಾಸವಾದದ ಮಾದರಿಯನ್ನು ತನಗೆ ಬೇಕಾದಂತೆ ಮಾರ್ಪಡಿಸಿಕೊಂಡು ಬಳಸಿಕೊಂಡಿತು. ಹಾಗಾಗಿ ವಿಕಾಸವಾದದ ಮಾದರಿಯು ಪುನರ್‌ಬೀಜಾಂಕುರವುಳ್ಳ (regermination) ಜೈವಿಕ ರೂಪವಾಗಿ ವಿಸ್ತಾರಗೊಳ್ಳಲಿಲ್ಲ. ಗತವೈಭವದ ಪುನರುತ್ಥಾನದ ಆಶಯವು ಶುದ್ಧಾತ್ಮಕ ಸಂಕೇತವಾದ ಮಹಿಳೆಯನ್ನು ಸಂಸ್ಕೃತಿಯ ಪಾಲಕಿ, ಪೋಷಕಿ ಹಾಗೂ ವಾಹಕಿಯಾಗಿಸಿತು. ಶ್ರೇಷ್ಠತೆಯ ಸಂಕೇತವಾದ ಆರ್ಯ ಮಹಿಳೆಯ ಮಾದರಿಗೆ ಪ್ರತಿಯಾಗಿ ಪಾಶ್ಚಾತ್ಯ ಮಹಿಳೆಯನ್ನು ವಿಲಾಸದ ಪ್ರತೀಕವಾಗಿ ನಿಲ್ಲಿಸಲಾಯ್ತು. ಅನ್ಯರ ಹಸ್ತಕ್ಷೇಪಗಳನ್ನು ಸಹಿಸದ ಅಶುದ್ಧದ ಭೀತಿಯುಳ್ಳ ಸನಾತನಿಗಳು ಆರ್ಯ ಮಹಿಳೆಯ ಮಾದರಿಯನ್ನು ವೈಭವೀಕರಿಸಿದರು. ಈ ಮಾದರಿಯ ವಾಹಕವಾಗಿ, ಪ್ರಸಾರ ಮಾಧ್ಯಮವಾಗಿ 'ಮಹಿಳೆಯರಿಂದ ಮಹಿಳೆಯರಿಗಾಗಿ' ಕಾರ್ಯಯೋಜನೆಯುಳ್ಳ ಮಹಿಳಾ ಸಾಹಿತ್ಯ ಸಂದರ್ಭವನ್ನು ಸೃಷ್ಟಿಸಲಾಯಿತು. ಸತೀ ಪದ್ಧತಿಗೆ ಬದಲಾಗಿ ಹೆಚ್ಚು ಮಾನವೀಯವೂ ಉದಾರವಾದುದೂ ಆದ ಶಿಕ್ಷಣ, ಸಾಹಿತ್ಯ ಕರ್ತೃತ್ವ ಕ್ಷೇತ್ರಗಳಲ್ಲಿ ಮಹಿಳೆಯರು ತೊಡಗುವಂತೆ ಮಾಡಲಾಯ್ತು. ವೈಧವ್ಯದಿಂದ ತಲೆದೋರಿದ 'ಗುಂಪಿನ ಹೆಚ್ಚುವರಿ ಸದಸ್ಯತ್ವ'ವು ವರ್ಣಸಂಕರಕ್ಕೆ ಕಾರಣವಾಗುವುದೆಂಬ ಭೀತಿಯಿಂದಾಗಿ ಶಿಕ್ಷಣ ಹಾಗೂ ಸಾಹಿತ್ಯಕ್ಷೇತ್ರದಲ್ಲಿ ಮಹಿಳೆಯನ್ನು ತೊಡಗಿಸುವುದು ಹೆಚ್ಚು ರಕ್ಷಣಾತ್ಮಕ ಉಪಾಯವೆನಿಸಿತು.

(ಮುಂದುವರೆಯುವುದು....)

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಸಂಭ್ರಮಿಸಿದ್ದು ಹೀಗೆ...

ನಾವು ಸಂಭ್ರಮಿಸಬಲ್ಲೆವು, ನಾವೂ ಸಂಘಟಿಸಬಲ್ಲೆವು ... ಇವು ಮಾರ್ಚ್ 8, 2009ರ ಮಹಿಳಾ ದಿನದಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸದಸ್ಯರು ಸಂತಸದಿಂದ ಉದ್ಗರಿಸಿದ ಮಾತು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ವಾಸ ಮಾಡುವಲ್ಲಿ ಅವರನ್ನು ಸಾಮಾಜಿಕವಾಗಿ ಸಂಘಟಿಸುತ್ತಿರುವ 'ಮುನ್ನಡೆ' ಈ ಬಾರಿಯ ಮಹಿಳಾ ದಿನಾಚರಣೆಯನ್ನು ವಿಶಿಷ್ಟವಾಗಿ 9 ವಿವಿಧ ಸ್ಥಳಗಳಲ್ಲಿ ಆಚರಿಸುವ ಯೋಜನೆ ಹಾಕಿಕೊಂಡಿತು.

ಕಸ್ತೂರಬಾನಗರ, ಸಂಜಯನಗರ, ಮಲ್ಲತ್ತಹಳ್ಳಿ, ಬಂಗಾರಪ್ಪನಗರ, ಕೆಂಚೇನಹಳ್ಳಿ, ನಾಯಂಡಹಳ್ಳಿ, ವಿನಾಯಕ ಬಡಾವಣೆ, ಪಂತರಪಾಳ್ಯ ಈ ಏರಿಯಾಗಳಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರನ್ನು ಒಗ್ಗೂಡಿಸಿ, ಅವರಿಂದ ಹಾಗೂ ಅವರ ಮಕ್ಕಳಿಂದ ಮಹಿಳಾ ವಿಷಯಗಳನ್ನು ಆಧರಿಸಿದ ರಂಗೋಲಿಗಳನ್ನು ಬಿಡಿಸಿ, ಸಣ್ಣ ಸಭೆ ನಡೆಸುವ ಮೂಲಕ ಮುನ್ನಡೆಯ ಸದಸ್ಯರು ಮಹಿಳಾ ದಿನಾಚರಣೆಯನ್ನು ಆಚರಿಸಿ ಹರ್ಷ ಪಟ್ಟರು.

ಕೆಂಗೇರಿ ಉಪನಗರದ ಬಳಿಯಿರುವ ಬೀಡಿ ಕಾರ್ಮಿಕರ ಕಾಲೋನಿಯಲ್ಲಿ ಸ್ಥಳೀಯರ ನೆರವಿನಿಂದ ಉಚಿತ ಆರೋಗ್ಯ ಶಿಬಿರವನ್ನೂ ಸಹ ಆಯೋಜಿಸಲಾಗಿತ್ತು.

ಸ್ಥಳೀಯರ ಬೆಂಬಲದೊಂದಿಗೇ ಈ ಕಾರ್ಯಕ್ರಮ ನಡೆಸುವುದು ಮುನ್ನಡೆಯ ಸದಸ್ಯರ ಆಶಯವಾಗಿತ್ತು. ಅದರ ಒಂದು ಭಾಗವಾಗಿ, ಕಾರ್ಯಕ್ರಮಕ್ಕಾಗಿ ಸುಮಾರು 7ರಿಂದ 8 ಸಾವಿರ ರೂ. ಗಳನ್ನು ಮುನ್ನಡೆಯ ಸದಸ್ಯರು ಸ್ಥಳೀಯರಿಂದ ಸಂಗ್ರಹಿಸಿದ್ದರು.


ಮಾನಸ ಬಳಗದ ರಾಜೇಶ್ವರಿ, ವಕೀಲೆ ದಿವ್ಯಾ, ಸ್ವ್ಯಾಡ್ ಸಂಸ್ಥೆಯ ಕಾರ್ಯಕರ್ತರಾದ ಲೀಲಾ, ಅಮುದಾ ಹಾಗೂ ಶ್ವೇತಾ, ಎನ್.ಟಿ.ಯು.ಐ. ನ ಅಪೂರ್ವ, ಸಂವಾದ ಸಂಸ್ಥೆಯ ಇಶ್ರತ್ ನಿಸಾರ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ನೆರೆದಿದ್ದ ಕಾರ್ಮಿಕರನ್ನುದ್ದೇಶಿಸಿ ತಮ್ಮ ಮಾತುಗಳನ್ನು ಹಂಚಿಕೊಂಡರು.

ಮಹಿಳಾ ದಿನಾಚರಣೆಯ ಆಚರಣೆಯ ಮಹತ್ವ, ಇಂದಿನ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಆರೋಗ್ಯ, ಶಿಕ್ಷಣ ಸ್ವಾತಂತ್ರ್ಯಗಳಿಂದ ಮಹಿಳೆ ಹೇಗೆ ವಂಚಿತಳಾಗುತ್ತಿದ್ದಾಳೆ ಎಂಬುದರ ಕುರಿತು ಎಲ್ಲಕಡೆಯೂ ಚರ್ಚಿಸಲಾಯಿತು.

ಎಲ್ಲ ಸ್ಥಳಗಳಲ್ಲಿಯೂ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಭಾಗವಹಿಸಿದ್ದವರಿಗೆ ಸಿಹಿ ಹಂಚಿ ಸಂಭ್ರಮಿಸಲಾಯಿತು. ಹೀಗೆ ಹಲವಾರು ಕಡೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಗಾರ್ಮೆಂಟ್ಸ್ ಕಾರ್ಮಿಕರ ಮುನ್ನಡೆಗೆ ಹೊಸ ಸಾಧ್ಯತೆಗಳನ್ನು ತೆರೆದಂತಾಗಿದೆ.

❑





ರಂಗೋಲಿ

ವರದಕ್ಷಿಣೆ

ಏರಿತ್ತು ಆಗಸಕ್ಕೆ ವರನ ಕಿಮ್ಮತ್ತು
ವರನ ಕಡೆಯವರಿಗೆಲ್ಲ ಮದುವೆ ಒಂದು ಗಮ್ಮತ್ತು
ವಧುವಿಗೂ, ವರದಕ್ಷಿಣೆ ಬರಿಯ ಶಾಪ
ವಧುವಿನ ಕಡೆಯವರಿಗೆ ಮದುವೆ ಒಂದು ಕಣ್ಣೀರ ಕೂಪ

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, 'ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದ ಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆ ಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆ ಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸ ಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered
Magazine

Posted on 9th of every month
at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018